Re. No. D. 221

सत्यमेव जयते

# भारत का राजपत्र
# The Gazette of India
# ಭಾರತ ರಾಜಪತ್ರ

( EXTRAORDINARY )
( ವಿಶೇಷ ಸಂಚಿಕೆ )

भाग IX अनुभाग 1
PART IX SECTION 1
ಭಾಗ IX ವಿಭಾಗ 1

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.

| | | |
|---|---|---|
| सं. १ नई दिल्ली, गुरुवार, जून ४, २०२० | ज्येष्ठ २२, १९४२ (शका) | खंड ४९ |
| No. 1 New Delhi, Thursday, June 4, 2020 | Jyeshta 22, 1942 (Saka) | Vol. 49 |
| ನಂ. ೧ ನವ ದೆಹಲಿ, ಗುರುವಾರ, ಜೂನ್ ೪, ೨೦೨೦ | ಜ್ಯೇಷ್ಠ ೨೨, ೧೯೪೨ (ಶಕ) | ಸಂಪುಟ ೪೯ |


**Ministry of Law and Justice**
Legislative Department
New Delhi, 04th June, 2020

ಕಾನೂನು ಮತ್ತು ನ್ಯಾಯ ಮಂತ್ರಾಲಯ
ವಿಧಾಯೀ ಇಲಾಖೆ
**ನವದೆಹಲಿ, 04ನೇ ಜೂನ್ 2020**

The Translation in Kannada of the following Acts, namely:- (1) The Public Debt Act, 1944 (18 of 1944) (2) The Dock Workers (Safety, Health and Welfare) Act, 1986 (54 of 1986) (3) The Building and Other Construction Workers' (Regulation of Employment and Conditions of Service) Act, 1996 (27 of 1996) (4) The Building and Other Construction Worker's Welfare Cess Act, 1996 (28 of 1996) (5) The Petroleum and Natural Gas Regulatory Board Act, 2006 (19 of 2006) (6) The Warehousing (Development and Regulation Act), 2007 (37 of 2007) (7) The Carriage by Road Act, 2007 (41 of 2007) (8) The Collection of Statistics Act, 2008 (7 of 2009) (9) The Protection of Children from Sexual Offences Act, 2012 (32 of 2012) (10) The Prohibition of Employment as Manual Scavengers and their Rehabilitation Act, 2013 - are hereby published under the authority of the President and shall be deemed to be authoritative text thereof in Kannada under clause (a) of Section 2 of the Authoritative Texts (Central Laws) Act, 1973 (50 of 1973)

# ಉಗ್ರಾಣ ಸೌಲಭ್ಯ (ಅಭಿವೃದ್ಧಿ ಮತ್ತು ವಿನಿಯಮ) ಅಧಿನಿಯಮ, 2007

(2007ರ ಸಂಖ್ಯೆ. 37)

[19ನೇ ಸೆಪ್ಟೆಂಬರ್, 2007]

ಉಗ್ರಾಣ ಅಭಿವೃದ್ಧಿ ಮತ್ತು ವಿನಿಯಮ, ಉಗ್ರಾಣ ರಸೀದಿಗಳ ವರ್ಗಾವಣೀಯತೆ, ಉಗ್ರಾಣ ಸೌಲಭ್ಯ ಅಭಿವೃದ್ಧಿ ಮತ್ತು ವಿನಿಯಾಮಕ ಪ್ರಾಧಿಕಾರದ ಸ್ಥಾಪನೆಗಾಗಿ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವ ಅಧಿನಿಯಮ.

ಇದು ಭಾರತ ಗಣರಾಜ್ಯದ ಐವತ್ತೆಂಟನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

## ಅಧ್ಯಾಯ – I

### ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಉಗ್ರಾಣ ಸೌಲಭ್ಯ (ಅಭಿವೃದ್ಧಿ ಮತ್ತು ವಿನಿಯಮ) ಅಧಿನಿಯಮ, 2007 ಎಂದು ಕರೆಯತಕ್ಕದ್ದು.

(2) ಇದು, ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಇಡೀ ಭಾರತಕ್ಕೆ ವ್ಯಾಪ್ತವಾಗತಕ್ಕದ್ದು.

(3) ಇದು, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ, ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ * ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–**

(ಎ) "ಮಾನ್ಯತೆ ನೀಡಿಕೆ ಏಜೆನ್ಸಿ" ಎಂದರೆ, ಏಜೆನ್ಸಿಯ ರಚನೆ ಹೇಗೆ ಇರಲಿ 5ನೇ ಪ್ರಕರಣದ ಮೇರೆಗೆ ಪ್ರಾಧಿಕಾರದಲ್ಲಿ ನೋಂದಾಯಿಸಲಾದ ಏಜೆನ್ಸಿ;

(ಬಿ) "ಕ್ರಮಾರ್ಹ ಕ್ಲೇಮು" ಎಂದರೆ, ಸ್ವತ್ತು ವರ್ಗಾವಣೆ ಅಧಿನಿಯಮ, 1882ರ 3ನೇ ಪ್ರಕರಣದಲ್ಲಿ ಅದಕ್ಕೆ ಕೊಟ್ಟಿರುವ ಅರ್ಥವನ್ನೇ ಹೊಂದಿರತಕ್ಕದ್ದು;

(ಸಿ) "ಪ್ರಾಧಿಕಾರ" ಎಂದರೆ, 24ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಸ್ಥಾಪಿಸಿದ ಉಗ್ರಾಣ ಸೌಲಭ್ಯ ಅಭಿವೃದ್ಧಿ ಮತ್ತು ವಿನಿಯಾಮಕ ಪ್ರಾಧಿಕಾರ;

(ಡಿ) "ಸರಕನ್ನು ಒಪ್ಪಿಸುವ ವ್ಯಕ್ತಿ" ಎಂದರೆ, ದಾಸ್ತಾನು ಮಾಡುವುದಕ್ಕಾಗಿ ಉಗ್ರಾಣ ಪಾಲಕನಿಗೆ ಸರಕುಗಳನ್ನು ಒಪ್ಪಿಸುವ ವ್ಯಕ್ತಿ;

(ಇ) "ಹಿಂಬರಹ ಪಡೆದವ" ಎಂದರೆ, ಯಾವ ವ್ಯಕ್ತಿಗೆ ಉಗ್ರಾಣ ರಸೀದಿಯನ್ನು ವರ್ಗಾವಣೆ ಮಾಡಲಾಗಿದೆಯೋ ಆ ವ್ಯಕ್ತಿ;

(ಎಫ್) "ಹಿಂಬರಹ" ಎಂದರೆ, ಉಗ್ರಾಣ ರಸೀದಿಯನ್ನು ವರ್ಗಾವಣೆ ಮಾಡುವ ಉದ್ದೇಶಕ್ಕಾಗಿ ಸರಕನ್ನು ಒಪ್ಪಿಸುವ ವ್ಯಕ್ತಿಯು ಅಥವಾ ಉಗ್ರಾಣ ರಸೀದಿಯ ಧಾರಕನು ಉಗ್ರಾಣ ರಸೀದಿಯ ಮೇಲೆ ಸಹಿ ಮಾಡುವುದು;

(ಜಿ) ಮಾಹಿತಿಗೆ ಸಂಬಂಧಿಸಿದಂತೆ "ವಿದ್ಯುನ್ಮಾನ ನಮೂನೆ" ಎಂದರೆ, ಮ್ಯಾಗ್ನಟಿಕ್‌ನಲ್ಲಿ, ಆಪ್ಟಿಕಲ್ ಮಾಧ್ಯಮದಲ್ಲಿ, ಕಂಪ್ಯೂಟರ್ ಮೆಮೊರಿಯಲ್ಲಿ, ಮೈಕ್ರೋ ಫಿಲಂನಲ್ಲಿ, ಕಂಪ್ಯೂಟರ್ ಜನರೇಟರ್‌ನಲ್ಲಿ, ಮೈಕ್ರೊ ಫೀಷ್‌ನಲ್ಲಿ ಅಥವಾ ಅದೇ ರೀತಿಯ ಸಾಧನದಲ್ಲಿ ಜನರೇಟ್ ಮಾಡಿದ, ಕಳುಹಿಸಿದ, ಸ್ವೀಕರಿಸಿದ ಅಥವಾ ಸಂಗ್ರಹಿಸಿದ ಯಾವುದೇ ಮಾಹಿತಿ.

(ಹೆಚ್) "ತತ್ಸದೃಶ ಸರಕುಗಳು" ಎಂದರೆ ವ್ಯಾಪಾರದ ಸ್ವರೂಪದಿಂದ ಅಥವಾ ಬಳಕೆಯಿಂದ, ಯಾವ ಸರಕುಗಳ ಯಾವುದೇ ಯೂನಿಟ್ ಅದೇ ಬಗೆಯ ಯಾವುದೇ ಇತರ ಯೂನಿಟ್‌ಗೆ ಸಮಾನವಾಗಿರುವುದೋ ಮತ್ತು ಉಗ್ರಾಣ ಪಾಲಕನು ತತ್ಸದೃಶ ಸರಕುಗಳಾಗಿ ಸ್ವೀಕರಿಸಿರುವನೋ ಆ ಯಾವುವೇ ಸರಕುಗಳು;

(ಐ) "ಸರಕುಗಳು" ಎಂದರೆ, ತತ್ಸದೃಶವಾಗಿರಲಿ ಅಥವಾ ಆಗಿಲ್ಲದಿರಲಿ (ಕ್ರಮಾರ್ಹ ಕ್ಲೇಮುಗಳು, ಹಣ ಮತ್ತು ಭದ್ರತೆಗಳನ್ನು ಹೊರತುಪಡಿಸಿ), ಎಲ್ಲಾ ಮೂರ್ತ ಸರಕುಗಳು;

(ಜೆ) "ದರ್ಜೆ" ಎಂದರೆ, ಕೃಷಿ ಉತ್ಪನ್ನ (ಶ್ರೇಣೀಕರಿಸುವ ಮತ್ತು ಗುರುತು ಹಾಕುವ) ಅಧಿನಿಯಮ, 1937 ರ (1937ರ 1) ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರೇ ಯಾವುದೇ ಕಾನೂನಿನ ಮೇರೆಗೆ ಕೇಂದ್ರ ಸರ್ಕಾರವು ಇಂಥ ದರ್ಜೆಯದೆಂದು ಹೆಸರಿಸಿ ಅಧಿಸೂಚಿಸಿದ ಯಾವುವೇ ಸರಕುಗಳ ಗುಣಮಟ್ಟದ ಮಾನಕ;

(ಕೆ) "ಧಾರಕ" ಎಂದರೆ,–

(i) ವರ್ಗಾವಣೀಯ ಉಗ್ರಾಣ ರಸೀದಿಗೆ ಸಂಬಂಧಿಸಿದಂತೆ, ಅಂಥ ರಸೀದಿಯ ಸ್ವಾಧೀನತೆಯನ್ನು ಹೊಂದಿರುವ ಮತ್ತು ಅದರ ಮೇಲೆ ಹಿಂಬರಹ ಮಾಡಿರುವ ಸರಕುಗಳಿಗೆ ಹಕ್ಕನ್ನು ಹೊಂದಿರುವ ವ್ಯಕ್ತಿ; ಮತ್ತು

---

* ದಿನಾಂಕ: 25ನೇ ಅಕ್ಟೋಬರ್ 2010 ರಂದು ಜಾರಿಗೆ ಬಂದಿದೆ, ದಿನಾಂಕ: 21ನೇ ಅಕ್ಟೋಬರ್ 2010 ರ ಅಧಿಸೂಚನೆ ಸಂಖ್ಯೆ: ಎಸ್.ಓ. 2613 (ಇ) ನೋಡಿ. ಭಾರತ ರಾಜಪತ್ರದ ವಿಶೇಷ ಸಂಚಿಕೆಯ ಭಾಗ–II ರ ಪ್ರಕರಣ 3 (ii) ನೋಡಿ.

(ii) ವರ್ಗಾವಣೀಯವಲ್ಲದ ಉಗ್ರಾಣ ರಸೀದಿಗೆ ಸಂಬಂಧಿಸಿದಂತೆ, ಯಾವ ಸರಕುಗಳನ್ನು ವ್ಯಕ್ತಿಯ ವಶಕ್ಕೆ ಒಪ್ಪಿಸಬೇಕಾಗಿದೆಯೋ ಆ ವ್ಯಕ್ತಿ ಎಂದು ರಸೀದಿಯಲ್ಲಿ ಹೆಸರಿಸಿದ ವ್ಯಕ್ತಿ ಅಥವಾ ಆ ವ್ಯಕ್ತಿಯಿಂದ ಹಸ್ತಾಂತರ ಪಡೆದ ವ್ಯಕ್ತಿ.

(ಎಲ್) "ಸದಸ್ಯ" ಎಂದರೆ, ಪ್ರಾಧಿಕಾರದ ಸದಸ್ಯ ಮತ್ತು ಅದರ ಅಧ್ಯಕ್ಷನು ಒಳಗೊಳ್ಳುತ್ತಾನೆ;

(ಎಂ) "ವರ್ಗಾವಣೀಯ ಉಗ್ರಾಣ ರಸೀದಿ" ಎಂದರೆ, ಯಾವ ರಸೀದಿಯಲ್ಲಿ ತೋರಿಸಿರುವ ಸರಕುಗಳು ಆ ರಸೀದಿಯ ಪ್ರಕಾರವೇ ಸರಕುಗಳನ್ನು ಒಪ್ಪಿಸುವ ವ್ಯಕ್ತಿಗೆ ತಲುಪಿಸುವಂಥವುಗಳಾಗಿವೆಯೋ ಆ ರಸೀದಿ ಅಥವಾ ಯಾವ ಆದೇಶದ ಬಗ್ಗೆ ಮಾಡುವ ಹಿಂಬರಹವು ಆ ಆದೇಶದಂತೆಯೇ ಆ ಸರಕುಗಳನ್ನು ವರ್ಗಾವಣೆ ಮಾಡುವ ಪರಿಣಾಮವನ್ನು ಹೊಂದಿರುವುದೋ ಮತ್ತು ಆ ಹಿಂಬರಹದಂತೆ ವರ್ಗಾವಣೆ ಪಡೆದ ವ್ಯಕ್ತಿಯು ನ್ಯಾಯಸಮ್ಮತ ಸ್ವಾಮ್ಯವನ್ನು ಪಡೆಯುವನೋ ಆ ಆದೇಶ.

(ಎನ್) "ವರ್ಗಾವಣೀಯವಲ್ಲದ ಉಗ್ರಾಣ ರಸೀದಿ" ಎಂದರೆ, ವರ್ಗಾವಣೆ ಮಾಡಲಾಗುವ ಉಗ್ರಾಣ ರಸೀದಿ ಅಲ್ಲದ ಉಗ್ರಾಣ ರಸೀದಿ;

(ಓ) "ಅಧಿಸೂಚನೆ" ಎಂದರೆ, ರಾಜಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ;

(ಪಿ) "ವ್ಯಕ್ತಿ" ಪದದಲ್ಲಿ ಫರ್ಮ್, ಸಹಕಾರ ಸಂಘವು ಅಥವಾ ನಿಗಮಿತವಾಗಿರಲೀ ಅಥವಾ ನಿಗಮಿತವಾಗಿಲ್ಲದಿರಲೀ, ವ್ಯಕ್ತಿಗಳ ಯಾವುದೇ ಸಂಸ್ಥೆಯು ಅಥವಾ ನಿಕಾಯವು ಒಳಗೊಳ್ಳುತ್ತದೆ;

(ಕ್ಯೂ) "ನಿಯಮಿಸಿದ" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಆರ್) ವಿನಿಯಮ ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಿದ **"ವಿನಿಯಮ"**;

(ಎಸ್) "ಉಗ್ರಾಣ" ಎಂದರೆ, ಉಗ್ರಾಣ ಪಾಲಕನು ಯಾವ ಆವರಣಗಳಲ್ಲಿ ಸರಕು ಒಪ್ಪಿಸುವ ವ್ಯಕ್ತಿಯು ಒಪ್ಪಿಸಿದ ಸರಕುಗಳನ್ನು ತನ್ನ ಅಭಿರಕ್ಷೆಗೆ ತೆಗೆದುಕೊಳ್ಳುವನೋ ಆ ಆವರಣಗಳಲ್ಲಿ ವಿನಿಯಮಗಳ ಮೂಲಕ ಪ್ರಾಧಿಕಾರವು ನಿರ್ದಿಷ್ಟಪಡಿಸಿದ ಮಾನವ ಶಕ್ತಿಯೂ ಸೇರಿದಂತೆ ಎಲ್ಲಾ ಅಗತ್ಯತೆಗಳಿಗೆ ಅನುಗುಣವಾಗಿರುವ (ಯಾವುದೇ ಸಂರಕ್ಷಿತ ಸ್ಥಳವೂ ಸೇರಿದಂತೆ) ಯಾವುವೇ ಆವರಣಗಳು ಮತ್ತು ನಿಯಂತ್ರಿತ ಉಷ್ಣಾಂಶದ ಮತ್ತು ತೇವಾಂಶದ ಸ್ಥಿತಿಗತಿಗಳಲ್ಲಿ ಸರಕುಗಳನ್ನು ದಾಸ್ತಾನು ಮಾಡುವ ಸ್ಥಳವು ಒಳಗೊಳ್ಳುತ್ತದೆ;

(ಟಿ) "ಉಗ್ರಾಣ ಸೌಲಭ್ಯ ವ್ಯವಹಾರ" ಎಂದರೆ, ಸಕರುಗಳನ್ನು ದಾಸ್ತಾನು ಮಾಡುವ ಮತ್ತು ವರ್ಗಾವಣೀಯ ಉಗ್ರಾಣ ರಸೀದಿಗಳ ನೀಡಿಕೆಗೆ ಸಂಬಂಧಪಟ್ಟಂತೆ ಉಗ್ರಾಣಗಳನ್ನು ನಿರ್ವಹಣೆ ಮಾಡುವ ವ್ಯವಹಾರ;

(ಯು) "ಉಗ್ರಾಣ ರಸೀದಿ" ಎಂದರೆ, ಉಗ್ರಾಣ ಪಾಲಕನು ಯಾವ ಸರಕುಗಳ ಒಡೆಯನಲ್ಲವೋ ಆ ಸರಕುಗಳನ್ನು ದಾಸ್ತಾನು ಇಟ್ಟುಕೊಂಡಿದ್ದಕ್ಕಾಗಿ ಉಗ್ರಾಣ ಪಾಲಕನು ಅಥವಾ ಅವನಿಂದ ಯುಕ್ತವಾಗಿ ಅಧಿಕೃತಗೊಂಡ ಪ್ರತಿನಿಧಿಯು (ಬೇರೆ ಯಾವುದೇ ಹೆಸರಿನಿಂದ ಕರೆದಿರುವ ಸರಕು ಒಪ್ಪಿಸುವ ವ್ಯಕ್ತಿಯೂ ಸೇರಿದಂತೆ) ಲಿಖಿತದಲ್ಲಿ ಅಥವಾ ವಿದ್ಯುನ್ಮಾನ ನಮೂನೆಯಲ್ಲಿ ನೀಡಿದ ಸ್ವೀಕೃತಿ ಪತ್ರ;

(ವಿ) "ಉಗ್ರಾಣ ಪಾಲಕ" ಎಂದರೆ, ಉಗ್ರಾಣ ಸೌಲಭ್ಯದ ವ್ಯವಹಾರವನ್ನು ನಡೆಸುವುದಕ್ಕಾಗಿ ಪ್ರಾಧಿಕಾರವು ಅಥವಾ ಮಾನ್ಯತೆ ನೀಡಿಕೆ ಏಜೆನ್ಸಿಯು ಯಾವುದೇ ಉಗ್ರಾಣದ ಅಥವಾ ಉಗ್ರಾಣಗಳ ಸಂಬಂಧದಲ್ಲಿ ಯಾವ ವ್ಯಕ್ತಿಗೆ ನೋಂದಣಿ ಪ್ರಮಾಣಪತ್ರವನ್ನು ನೀಡಿದೆಯೋ ಆ ಯಾರೇ ವ್ಯಕ್ತಿ.

## ಅಧ್ಯಾಯ – II

## ಉಗ್ರಾಣ ಸೌಲಭ್ಯದ ವ್ಯವಹಾರ ವಿನಿಯಮ

**3. ವರ್ಗಾವಣೀಯ ಉಗ್ರಾಣ ರಸೀದಿಗಳನ್ನು ನೀಡುವ ಉಗ್ರಾಣಗಳನ್ನು ನೋಂದಣಿ ಮಾಡುವುದು ಅಗತ್ಯ.–** (1) ಯಾರೇ ವ್ಯಕ್ತಿಯು ಸಂಬಂಧಪಟ್ಟ ಉಗ್ರಾಣಕ್ಕೆ ಅಥವಾ ಉಗ್ರಾಣಗಳಿಗೆ ಸಂಬಂಧಿಸಿದಂತೆ ಈ ಅಧಿನಿಯಮದ ಮೇರೆಗೆ ಪ್ರಾಧಿಕಾರವು ಮಂಜೂರು ಮಾಡಿದ ನೋಂದಣಿ ಪ್ರಮಾಣಪತ್ರವನ್ನು ಪಡೆದ ಹೊರತು ಆತನು ಉಗ್ರಾಣ ಸೌಲಭ್ಯ ವ್ಯವಹಾರವನ್ನು ಪ್ರಾರಂಭಿಸತಕ್ಕದ್ದಲ್ಲ ಅಥವಾ ನಡೆಸತಕ್ಕದ್ದಲ್ಲ:

ಪರಂತು, ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ನಿಕಟಪೂರ್ವದಲ್ಲಿ ಉಗ್ರಾಣ ಸೌಲಭ್ಯದ ವ್ಯವಹಾರವನ್ನು ನಡೆಸುತ್ತಿದ್ದ ವ್ಯಕ್ತಿಗೆ ಅವನು ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಮೂವತ್ತು ದಿನಗಳೊಳಗೆ ನೋಂದಣಿಗಾಗಿ, ಅರ್ಜಿಯನ್ನು ಸಲ್ಲಿಸಿದ ಸಂದರ್ಭದಲ್ಲಿ ಅಂಥ ವ್ಯವಹಾರವನ್ನು ನಡೆಸಲು ಅನುಮತಿ ನೀಡತಕ್ಕದ್ದು:

ಮತ್ತೂ ಪರಂತು, ಯಾವ ಉಗ್ರಾಣಗಳು ವರ್ಗಾವಣೀಯ ಉಗ್ರಾಣ ರಸೀದಿಯನ್ನು ನೀಡುವ ಉದ್ದೇಶ ಹೊಂದಿಲ್ಲವೋ ಆ ಉಗ್ರಾಣಗಳಿಗೆ ಅಂಥ ನೋಂದಣಿಯ ಅಗತ್ಯ ಇರತಕ್ಕದ್ದಲ್ಲ.

**ವಿವರಣೆ.–** ಸಂದೇಹಗಳ ನಿವಾರಣೆಗಾಗಿ, ಈ ಅಧಿನಿಯಮದ ಮೇರೆಗೆ ನೋಂದಾಯಿಸಲಾದ ಉಗ್ರಾಣವು ವರ್ಗಾವಣೀಯವಲ್ಲದ ಉಗ್ರಾಣ ರಸೀದಿಗಳನ್ನು ನೀಡಲು ಸಹ ಅರ್ಹವಾಗಿರತಕ್ಕದ್ದು ಎಂದು ಈ ಮೂಲಕ ಸ್ಪಷ್ಟಪಡಿಸಲಾಗಿದೆ.

(2) ಉಪ-ಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ ಪ್ರಾಧಿಕಾರವು, ತಾನು ಹೊರಡಿಸಿದಂಥ ವಿನಿಯಮಗಳಿಗೆ ಮತ್ತು ಮಾರ್ಗಸೂಚಿಗೆ ಒಳಪಟ್ಟು, 5ನೇ ಪ್ರಕರಣದ ಮೇರೆಗೆ ಮಾನ್ಯತೆ ನೀಡಿಕೆ ಏಜೆನ್ಸಿಯಾಗಿ ನೋಂದಾಯಿತನಾದ ಯಾರೇ ವ್ಯಕ್ತಿಗೆ

ವರ್ಗಾವಣೀಯ ಉಗ್ರಾಣ ರಸೀದಿಗಳನ್ನು ನೀಡುವ ಉಗ್ರಾಣ ಸೌಲಭ್ಯದ ವ್ಯವಹಾರವನ್ನು ನಡೆಸುವುದಕ್ಕಾಗಿ ಮಾನ್ಯತೆ ಪ್ರಮಾಣಪತ್ರವನ್ನು ನೀಡುವ ಅಧಿಕಾರವನ್ನು ನೀಡಬಹುದು.

**4. ಉಗ್ರಾಣಗಳ ನೋಂದಣಿ.-** (1) ವರ್ಗಾವಣೀಯ ಉಗ್ರಾಣ ರಸೀದಿಗಳನ್ನು ನೀಡುವ ಉಗ್ರಾಣದ ನಿರ್ವಹಣೆಯ ವ್ಯವಹಾರವನ್ನು ಪ್ರಾರಂಭಿಸಲು ಅಥವಾ ನಡೆಸಲು ಅಪೇಕ್ಷಿಸುವ ಯಾರೇ ವ್ಯಕ್ತಿಯು ತಾನು ಒಡೆತನ ಹೊಂದಿರುವ ಅಥವಾ ತನ್ನ ಸಾಧೀನಾನುಭವದಲ್ಲಿರುವ ಒಂದು ಅಥವಾ ಹೆಚ್ಚು ಉಗ್ರಾಣಗಳ ನೋಂದಣಿಗಾಗಿ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಬಹುದು.

(2) ಉಪ-ಪ್ರಕರಣ (1) ರ ಮೇರೆಗೆ ನೋಂದಣಿಗಾಗಿ ಸಲ್ಲಿಸುವ ಪ್ರತಿಯೊಂದು ಅರ್ಜಿಯು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿರತಕ್ಕದ್ದು ಮತ್ತು ಅದರೊಂದಿಗೆ ನಿಯಮಿಸಬಹುದಾದಂಥ ಫೀಜನ್ನು ಇರಿಸತಕ್ಕದ್ದು.

(3) ಪ್ರಾಧಿಕಾರವು, ತಾನು ಸೂಕ್ತವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸಿದ ತರುವಾಯ ಮತ್ತು ಅಂಥ ನಿಬಂಧನೆಗಳಿಗೆ ಹಾಗೂ ಷರತ್ತುಗಳಿಗೆ ಒಳಪಟ್ಟು, ಉಗ್ರಾಣದ ಅಥವಾ ಉಗ್ರಾಣಗಳ ನಿರ್ವಹಣೆಯ ವ್ಯವಹಾರವನ್ನು ನಡೆಸಲು ಮತ್ತು ವರ್ಗಾವಣೀಯ ಉಗ್ರಾಣ ರಸೀದಿಗಳನ್ನು ನೀಡಲು ಅರ್ಜಿದಾರನಿಗೆ ಅಧಿಕಾರವನ್ನು ನೀಡಿ, ನೋಂದಣಿ ಸಂಖ್ಯೆಯನ್ನು ಹೊಂದಿರುವ ಉಗ್ರಾಣದ ನೋಂದಣಿ ಪ್ರಮಾಣಪತ್ರವನ್ನು ನಿಯಮಿಸಿದ ನಮೂನೆಯಲ್ಲಿ ಆತನಿಗೆ ನೀಡಬಹುದು.

(4) ಪ್ರಾಧಿಕಾರವು, ಯಾವ ಉಗ್ರಾಣದ ಸಂಬಂಧದಲ್ಲಿ ಅರ್ಜಿಯನ್ನು ಸಲ್ಲಿಸಲಾಗಿದೆಯೋ ಆ ಉಗ್ರಾಣದಲ್ಲಿ, ಅರ್ಜಿಯಲ್ಲಿ ನಿರ್ದಿಷ್ಟಪಡಿಸಿದ ಸ್ವರೂಪದ ಸರಕುಗಳನ್ನು ದಾಸ್ತಾನು ಮಾಡುವುದಕ್ಕೆ ಅಗತ್ಯವಾದಂಥ ಸೌಲಭ್ಯಗಳು ಮತ್ತು ಸುರಕ್ಷತೆಗಳು ಸಾಕಷ್ಟು ಪ್ರಮಾಣದಲ್ಲಿವೆ ಎಂದು ತನಗೆ ಮನವರಿಕೆಯಾದ ಹೊರತು ಮತ್ತು ಅರ್ಜಿದಾರನು, ನಿಯಮಿಸಬಹುದಾದಂಥ ಹಣಕಾಸು, ವ್ಯವಸ್ಥಾಪನ ಮತ್ತು ಇತರ ಅರ್ಹತಾ ಮಾನದಂಡಗಳನ್ನು ಪೂರೈಸಿದ ಹೊರತು ಮತ್ತು ತನ್ನ ಸಕ್ಷಮತೆಯನ್ನು ಮನವರಿಕೆ ಮಾಡಿಕೊಟ್ಟ ಹೊರತು ಈ ಪ್ರಕರಣದ ಮೇರೆಗೆ ನೋಂದಣಿ ಪ್ರಮಾಣಪತ್ರವನ್ನು ನೀಡತಕ್ಕದ್ದಲ್ಲ:

ಪರಂತು, ಅರ್ಜಿದಾರನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಅವಕಾಶ ನೀಡಿದ ಹೊರತು, ಈ ಪ್ರಕರಣದ ಮೇರೆಗೆ ಯಾರೇ ಅರ್ಜಿದಾರನಿಗೆ ಯಾವುದೇ ನೋಂದಣಿ ಪ್ರಮಾಣಪತ್ರವನ್ನು ನೀಡಲು ನಿರಾಕರಿಸತಕ್ಕದ್ದಲ್ಲ.

**5. ಮಾನ್ಯತೆ ನೀಡಿಕೆ ಏಜೆನ್ಸಿಗಳ ನೋಂದಣಿ.-** (1) ಪ್ರಾಧಿಕಾರವು, ವರ್ಗಾವಣೀಯ ಉಗ್ರಾಣ ರಸೀದಿಗಳನ್ನು ನೀಡುವ ಉಗ್ರಾಣಗಳಿಗೆ ಮಾನ್ಯತೆ ಪ್ರಮಾಣಪತ್ರವನ್ನು ನೀಡಲು ಅಧಿಕಾರ ನೀಡಬಹುದಾದಂಥ, ಮಾನ್ಯತೆ ನೀಡುವ ಏಜೆನ್ಸಿಗಳ ಸಂಖ್ಯೆಯನ್ನು ಕಾಲಕಾಲಕ್ಕೆ ನಿರ್ಧರಿಸತಕ್ಕದ್ದು.

(2) ಈ ಅಧಿನಿಯಮದ ಮೇರೆಗೆ ನಿಯಮಿಸಬಹುದಾದಂಥ ಅರ್ಹತೆಗಳನ್ನು ಮತ್ತು ಇತರೆ ಅಗತ್ಯತೆಗಳನ್ನು ಪೂರೈಸುವ ಮತ್ತು ಮಾನ್ಯತೆ ನೀಡಿಕೆ ಏಜೆನ್ಸಿಯಾಗಿ ಕಾರ್ಯನಿರ್ವಹಿಸಲು ಅಪೇಕ್ಷಿಸುವ ಯಾರೇ ವ್ಯಕ್ತಿಯು ಈ ಅಧಿನಿಯಮದ ಮೇರೆಗೆ ಅಂಥ ಏಜೆನ್ಸಿಯಾಗಿ ನೋಂದಾಯಿಸುವಂತೆ ಕೋರಿ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಬಹುದು.

(3) ಉಪ-ಪ್ರಕರಣ (2)ರ ಮೇರೆಗೆ ಸಲ್ಲಿಸುವ ಪ್ರತಿಯೊಂದು ಅರ್ಜಿಯು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿರತಕ್ಕದ್ದು ಮತ್ತು ಅದರೊಂದಿಗೆ ನಿಯಮಿಸಬಹುದಾದಂಥ ಫೀಜನ್ನು ಮತ್ತು ಭದ್ರತಾ ಠೇವಣಿಯನ್ನು ಇರಿಸತಕ್ಕದ್ದು.

(4) ಮಾನ್ಯತೆ ನೀಡಿಕೆ ಏಜೆನ್ಸಿಯಾಗಿ ನೋಂದಣಿ ಪ್ರಮಾಣಪತ್ರವನ್ನು ಯಾವ ನಮೂನೆಯಲ್ಲಿ ಮತ್ತು ಯಾವ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು ಈ ಪ್ರಕರಣದ ಮೇರೆಗೆ ನೀಡಬಹುದೋ ಆ ನಮೂನೆಯು ಮತ್ತು ನಿಬಂಧನೆಗಳು ಮತ್ತು ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

## ಅಧ್ಯಾಯ - III

## ಉಗ್ರಾಣ ಪಾಲಕರು

**6. ಉಗ್ರಾಣ ಪಾಲಕರ ಹೊಣೆಗಾರಿಕೆಗಳು.-** (1) ಉಗ್ರಾಣ ಪಾಲಕನು, ಸರಕುಗಳ ಸಂಬಂಧದಲ್ಲಿ, ಸರಕುಗಳ ಗುಣಮಟ್ಟದ ಮತ್ತು ಮೌಲ್ಯದ ಬಗ್ಗೆ ಎಚ್ಚರಿಕೆಯಿಂದಿರುವ ಮತ್ತು ಜಾಗರೂಕನಾದ ಮಾಲೀಕನು ಸಮಾನ ಪರಿಸ್ಥಿತಿಗಳಲ್ಲಿ ಅವುಗಳ ಅಭಿರಕ್ಷೆಯ ಬಗ್ಗೆ ವಹಿಸಬಹುದಾದಂಥ ಎಚ್ಚರಿಕೆಯನ್ನು ಮತ್ತು ಜಾಗರೂಕತೆಯನ್ನು ವಹಿಸಲು ವಿಫಲನಾದ ಕಾರಣದಿಂದಾಗಿ ಉಂಟಾಗುವಂಥ ಸರಕುಗಳ ನಷ್ಟಕ್ಕೆ ಅಥವಾ ಹಾನಿಗೆ ಉಗ್ರಾಣ ಪಾಲಕನೇ ಹೊಣೆಗಾರನಾಗಿರತಕ್ಕದ್ದು.

(2) ಉಗ್ರಾಣ ಪಾಲಕನು, ಎಲ್ಲಾ ರೀತಿಯ ಎಚ್ಚರಿಕೆಯನ್ನು ವಹಿಸಿದರೂ ಮತ್ತು ಮುನ್ನೆಚ್ಚರಿಕೆಯ ಕ್ರಮಗಳನ್ನು ತೆಗೆದುಕೊಂಡಿದ್ದರೂ, ಅನಿವಾರ್ಯ ಪರಿಸ್ಥಿತಿಗಳಿಂದಾಗಿ ಸರಕುಗಳು ಹಾನಿಗೊಂಡ ಅಥವಾ ನಷ್ಟವಾದ ಸಂದರ್ಭದಲ್ಲಿ ಸರಕುಗಳನ್ನು ಉಗ್ರಾಣದಲ್ಲಿ ದಾಸ್ತಾನು ಇಟ್ಟ ಸಮಯದಲ್ಲಿ ಸರಕುಗಳಿಗೆ ಇದ್ದ ಮೌಲ್ಯಕ್ಕೆ ಸಮನಾದ ಪರಿಹಾರವನ್ನು ಉಗ್ರಾಣ ಪಾಲಕನು ಸಂದಾಯ ಮಾಡತಕ್ಕದ್ದು.

(3) ಉಗ್ರಾಣ ಪಾಲಕನ ನಿರ್ಲಕ್ಷ್ಯದ ಕಾರಣದಿಂದಾಗಿ ಸರಕುಗಳ ಹಾನಿಗೊಂಡ ಅಥವಾ ನಷ್ಟವಾದ ಸಂದರ್ಭದಲ್ಲಿ, ಸಂದಾಯ ಮಾಡಬೇಕಾದ ಪರಿಹಾರವು ಸರಕುಗಳ ಮೌಲ್ಯಕ್ಕೆ ಹಾಗೂ ಅದರ ರಸೀದಿಧಾರಕನಿಗೆ ಲಾಭದಲ್ಲಿ ಉಂಟಾದ ನಷ್ಟಕ್ಕೆ ಸಮನಾದ ಮೊತ್ತವಾಗಿರತಕ್ಕದ್ದು.

(4) ಉಗ್ರಾಣ ಪಾಲಕನು, ದಾಸ್ತಾನು ಇಟ್ಟುಕೊಳ್ಳುವುದಕ್ಕಾಗಿ ತನಗೆ ವಹಿಸಿಕೊಟ್ಟ ಸರಕುಗಳು ದೈವಕೃತ ಘಟನೆಯಂಥ, ಯುದ್ಧಕಾರ್ಯದಂಥ, ಜನತಾ ಶತ್ರುಗಳ ಕೃತ್ಯದಂಥ ಮತ್ತು ಅದೇ ರೀತಿಯ ಸಂದರ್ಭ ಸನ್ನಿವೇಶಗಳಿಂದಾಗಿ, ನಷ್ಟವಾದರೆ, ನಾಶವಾದರೆ, ಹಾನಿಗೊಂಡರೆ ಅಥವಾ ನಶಿಸಿ ಹೋದರೆ ಅದಕ್ಕೆ ಹೊಣೆಗಾರನಾಗಿರತಕ್ಕದ್ದಲ್ಲ.

**7. ಉಗ್ರಾಣ ಪಾಲಕರ ಕರ್ತವ್ಯಗಳು.–** (1) ಕಾನೂನುಬದ್ಧ ಕಾರಣ ಇಲ್ಲದಿರುವಾಗ, ಉಗ್ರಾಣ ಪಾಲಕನು, ವರ್ಗಾವಣೀಯ ರಸೀದಿಯಲ್ಲಿ ಉಲ್ಲೇಖಿಸಿರುವ ಸರಕುಗಳನ್ನು ರಸೀದಿಯ ಧಾರಕನು ತಗಾದೆ ಮಾಡಿದಾಗ ಮತ್ತು ಧಾರಕನು ಈ ಮುಂದಿನ ಎಲ್ಲಾ ಷರತ್ತುಗಳನ್ನು ಪೂರೈಸಿದ ಮೇಲೆ ಎಂದರೆ:–

(ಎ) ಉಗ್ರಾಣದಲ್ಲಿ ತನ್ನ ಸರಕುಗಳನ್ನು ದಾಸ್ತಾನು ಇಡುವುದಕ್ಕೆ ತನಗಿರುವ ಹಕ್ಕನ್ನು ಮನವರಿಕೆ ಮಾಡಿಕೊಟ್ಟ ಮೇಲೆ;

(ಬಿ) ವರ್ಗಾವಣೀಯವಲ್ಲದ ರಸೀದಿ ಆಗಿದ್ದರೆ ಆ ರಸೀದಿಯನ್ನು ಹಿಂದಕ್ಕೆ ಒಪ್ಪಿಸಿದ ಮೇಲೆ ಮತ್ತು ವರ್ಗಾವಣೀಯ ರಸೀದಿ ಆಗಿದ್ದರೆ ಹಿಂಬರಹದೊಂದಿಗೆ ಆ ರಸೀದಿಯನ್ನು ಹಿಂದಕ್ಕೆ ಒಪ್ಪಿಸಿದ ಮೇಲೆ; ಮತ್ತು

(ಸಿ) ಸರಕುಗಳನ್ನು ಸ್ವೀಕರಿಸಿದ ಬಗ್ಗೆ ಲಿಖಿತದಲ್ಲಿ ಸ್ವೀಕೃತಿ ಕೊಟ್ಟ ಮೇಲೆ;

– ಆ ಧಾರಕನಿಗೆ ಒಪ್ಪಿಸತಕ್ಕದ್ದು.

(2) ಉಗ್ರಾಣ ಪಾಲಕನು ಈ ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ಸರಕುಗಳನ್ನು ಒಪ್ಪಿಸಲು ನಿರಾಕರಿಸಿದಲ್ಲಿ ಅಥವಾ ವಿಫಲನಾದಲ್ಲಿ, ಹಾಗೆ ನಿರಾಕರಿಸಿದ್ದಕ್ಕೆ ಅಥವಾ ವಿಫಲನಾದುದ್ದಕ್ಕೆ ಕಾನೂನುಬದ್ಧ ಕಾರಣ ಇರುವುದನ್ನು ರುಜುವಾತುಪಡಿಸುವ ಹೊಣೆಯು ಉಗ್ರಾಣ ಪಾಲಕನ ಮೇಲೆ ಇರತಕ್ಕದ್ದು.

**8. ಉಗ್ರಾಣ ವ್ಯವಹಾರದ ದಾಖಲೆಗಳನ್ನು ಮತ್ತು ಲೆಕ್ಕಪತ್ರಗಳನ್ನಿಡುವುದು ಉಗ್ರಾಣ ಪಾಲಕನ ಕರ್ತವ್ಯ.–** (1) ಪ್ರತಿಯೊಬ್ಬ ಉಗ್ರಾಣ ಪಾಲಕನು, ಉಗ್ರಾಣದಲ್ಲಿ ಸ್ವೀಕರಿಸಿದ ಮತ್ತು ಉಗ್ರಾಣದಿಂದ ಹಿಂದಕ್ಕೆ ಪಡೆದ ಎಲ್ಲಾ ಸರಕುಗಳ, ತನ್ನ ಸ್ವಾಧೀನದಲ್ಲಿರುವ ಬಳಸಿರದ ಎಲ್ಲಾ ರಸೀದಿಗಳ, ತಾನು ನೀಡಿದ, ತನಗೆ ಹಿಂದಿರುಗಿಸಿದ ಅಥವಾ ತಾನು ರದ್ದುಪಡಿಸಿದ ಎಲ್ಲಾ ರಸೀದಿಗಳ ದಾಖಲೆಗಳು ಮತ್ತು ಲೆಕ್ಕಪತ್ರಗಳು ಸೇರಿದಂತೆ ಉಗ್ರಾಣದ ನಿರ್ವಹಣೆಗೆ ಸಂಬಂಧಿಸಿದ ಎಲ್ಲಾ ವ್ಯವಹಾರಗಳ ಪೂರ್ಣವಾದ ಮತ್ತು ನಿಖರವಾದ ದಾಖಲೆಗಳ ಮತ್ತು ಲೆಕ್ಕಪತ್ರಗಳ ಸೆಟ್‌ನ್ನು ಸುರಕ್ಷಿತ ಸ್ಥಳದಲ್ಲಿ ಇಡತಕ್ಕದ್ದು.

(2) ಉಪ-ಪ್ರಕರಣ (1) ರ ಉಪಬಂಧಗಳಿಗೆ ಒಳಪಟ್ಟು, ಉಗ್ರಾಣ ಪಾಲಕನು, ಯಾವುದೇ ಇತರ ವ್ಯವಹಾರದ ದಾಖಲೆಗಳಿಗಿಂತ ಮತ್ತು ಲೆಕ್ಕಪತ್ರಗಳಿಗಿಂತ ಬೇರೆಯಾದ ಮತ್ತು ಭಿನ್ನವಾದ ಉಗ್ರಾಣ ವ್ಯವಹಾರದ ದಾಖಲೆಗಳನ್ನು ಮತ್ತು ಲೆಕ್ಕಪತ್ರಗಳನ್ನು ಸಂಖ್ಯಾನುಕ್ರಮದಲ್ಲಿ ಮತ್ತು ಪ್ರಾಧಿಕಾರವು ವಿನಿಮಯಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಅವಧಿಯವರೆಗೆ ಇಡತಕ್ಕದ್ದು.

(3) ಉಗ್ರಾಣ ಪಾಲಕನು, ಉಗ್ರಾಣ ವ್ಯವಹಾರದ ದಾಖಲೆಗಳನ್ನು ಮತ್ತು ಲೆಕ್ಕಪತ್ರಗಳನ್ನು ಪ್ರಾಧಿಕಾರವು ಅಪೇಕ್ಷಿಸಬಹುದಾದಂಥ ಯಾವುದೇ ಕಾಲದಲ್ಲಿ ಪರಿಶೀಲನೆಗಾಗಿ ಪ್ರಾಧಿಕಾರಕ್ಕೆ ಒದಗಿಸತಕ್ಕದ್ದು.

**9. ಹಾಳಾಗುವಂಥ ಮತ್ತು ಅಪಾಯಕಾರಿಯಾದಂಥ ಸರಕುಗಳ ಬಗ್ಗೆ ವ್ಯವಹರಿಸಲು ಉಗ್ರಾಣ ಪಾಲಕನಿಗಿರುವ ವಿಶೇಷಾಧಿಕಾರಗಳು.–** (1) ಸರಕುಗಳು ಹಾಳಾಗುವಂಥ ಅಥವಾ ಅಪಾಯಕಾರಿಯಾದಂಥ ಸ್ವರೂಪದವಾಗಿದ್ದರೆ ಅಥವಾ ಅವುಗಳನ್ನು ಇಟ್ಟುಕೊಳ್ಳುವುದರಿಂದ ಅವುಗಳ ಮೌಲ್ಯ ಭಾರಿ ಪ್ರಮಾಣದಲ್ಲಿ ಕುಸಿಯುವಂತಿದ್ದರೆ ಅಥವಾ ಇತರ ಸ್ವತ್ತಿಗೆ ಹಾನಿಯಾಗುವಂತಿದ್ದರೆ ಸರಕುಗಳ ರಸೀದಿಯ ಧಾರಕನ ಹೆಸರು ಮತ್ತು ವಿಳಾಸ ಉಗ್ರಾಣ ಪಾಲಕನಿಗೆ ತಿಳಿದಿದ್ದರೆ ಆ ಧಾರಕನಿಗೆ ಅಥವಾ ಆ ಧಾರಕನ ಹೆಸರು ಮತ್ತು ವಿಳಾಸ ಉಗ್ರಾಣ ಪಾಲಕನಿಗೆ ತಿಳಿದಿರದಿದ್ದರೆ ಸರಕುಗಳನ್ನು ದಾಸ್ತಾನು ಇಟ್ಟ ವ್ಯಕ್ತಿಗೆ, ಆ ಸರಕುಗಳ ಮೇಲಿನ ಹಕ್ಕನ್ನು ಮನವರಿಕೆ ಮಾಡಿಕೊಡುವಂತೆ ಮತ್ತು ಉಗ್ರಾಣದಿಂದ ಅವುಗಳನ್ನು ತೆಗೆದುಕೊಂಡು ಹೋಗುವಂತೆ ಆ ವ್ಯಕ್ತಿಯನ್ನು ಅಗತ್ಯಪಡಿಸಿ ಆ ಸಂದರ್ಭ ಸನ್ನಿವೇಶಗಳಲ್ಲಿ ಯುಕ್ತವಾದ ಮತ್ತು ಸಾಧ್ಯವಾದ ನೋಟೀಸನ್ನು ಉಗ್ರಾಣ ಪಾಲಕನು ನೀಡತಕ್ಕದ್ದು.

(2) ಉಪ-ಪ್ರಕರಣ (1)ರ ಮೇರೆಗೆ ಯಾವ ವ್ಯಕ್ತಿಗೆ ನೋಟೀಸನ್ನು ನೀಡಲಾಗಿದೆಯೋ ಆ ವ್ಯಕ್ತಿಯು, ಆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಕಾಲದೊಳಗೆ ಸರಕುಗಳ ಮೇಲೆ ತನಗಿರುವ ಹಕ್ಕನ್ನು ಮನವರಿಕೆ ಮಾಡಿಕೊಡಲು ಮತ್ತು ಆ ಸರಕುಗಳನ್ನು ತೆಗೆದುಕೊಂಡು ಹೋಗಲು ವಿಫಲನಾದರೆ, ಉಗ್ರಾಣ ಪಾಲಕನು ಆ ಸರಕುಗಳ ಬಗ್ಗೆ ಜಾಹೀರಾತು ನೀಡದೆಯೇ ಬಹಿರಂಗ ಅಥವಾ ಖಾಸಗಿ ಮಾರಾಟದಲ್ಲಿ ಆ ಸರಕುಗಳನ್ನು ಮಾರಾಟ ಮಾಡಬಹುದು.

(3) ಉಪ-ಪ್ರಕರಣ (1)ರಲ್ಲಿ ಉಲ್ಲೇಖಿಸಿದ ನೋಟೀಸನ್ನು, ಯಾವ ವ್ಯಕ್ತಿಗೆ ಅದನ್ನು ನೀಡಬೇಕಾಗಿದೆಯೋ ಆ ವ್ಯಕ್ತಿಯ ಹೆಸರಿಗೆ, ಆ ವ್ಯಕ್ತಿಯ ಕೊನೆಯದಾಗಿ ತಿಳಿದು ಬಂದ ವಿಳಾಸಕ್ಕೆ, ವಿದ್ಯುನ್ಮಾನ ಅಂಚೆ, ಸ್ಪೀಡ್ ಪೋಸ್ಟ್ ಅಥವಾ ರಿಜಿಸ್ಟರ್ ಪೋಸ್ಟ್ ಮೂಲಕ ಅಥವಾ ತಂತಿ ಮೂಲಕ ಕಳುಹಿಸಿ ಕೊಡುವ ಮೂಲಕ ನೀಡಬಹುದು ಮತ್ತು ಹಾಗೆ ಕಳುಹಿಸಿಕೊಟ್ಟ ದಿನಾಂಕದಿಂದ ಮೂರನೆಯ ದಿವಸದಂದು ನೋಟೀಸನ್ನು ನೀಡಲಾಗಿದೆಯೆಂದು ಭಾವಿಸತಕ್ಕದ್ದು.

(4) ಉಗ್ರಾಣ ಪಾಲಕನು ತಕ್ಕ ಪ್ರಯತ್ನ ಮಾಡಿದ ತರುವಾಯವೂ ಸರಕುಗಳನ್ನು ಮಾರಾಟ ಮಾಡಲು ಅವನಿಗೆ ಸಾಧ್ಯವಾಗದಿದ್ದರೆ, ಉಗ್ರಾಣ ಪಾಲಕನು ತಾನು ಸೂಕ್ತವೆಂದು ಭಾವಿಸಬಹುದಾದಂಥ ಇತರೆ ರೀತಿಯಲ್ಲಿ ಅವುಗಳನ್ನು ವಿಲೇ ಮಾಡಬಹುದು ಮತ್ತು ಆ ಕಾರಣಕ್ಕಾಗಿ ಯಾವುದೇ ಹೊಣೆಗಾರಿಕೆ ಅವನ ಮೇಲೆ ಇರತಕ್ಕದ್ದಲ್ಲ.

(5) ಈ ಪ್ರಕರಣದ ಮೇರೆಗೆ ಸರಕುಗಳ ಯಾವುದೇ ಮಾರಾಟದಿಂದ ಅಥವಾ ವಿಲೆಯಿಂದ ಬಂದ ಹಣದಲ್ಲಿ ಉಗ್ರಾಣ ಪಾಲಕನು, ತನಗೆ ಬರಬೇಕಾದ ಹಣವನ್ನು ಮುರಿದುಕೊಂಡು ಉಳಿದ ಹಣವನ್ನು ರಸೀದಿಯ ಧಾರಕನಿಗಾಗಿ, ವಿಶ್ವಾಸದ ಮೇಲೆ ತನ್ನಲ್ಲಿ ಇಟ್ಟುಕೊಳ್ಳತಕ್ಕದ್ದು.

(6) ಪ್ರಕರಣದ ಸಂದರ್ಭ ಸನ್ನಿವೇಶಗಳಲ್ಲಿ ನೋಟೀಸುಗಳನ್ನು ನೀಡುವುದರಿಂದ ಸರಕುಗಳಿಗೆ ಮತ್ತಷ್ಟು ಪ್ರತಿಕೂಲ ಪರಿಣಾಮ ಉಂಟಾಗುವ ಸಂಭವ ಇದೆ ಎಂದು ಯುಕ್ತ ಕಾರಣಗಳ ಆಧಾರದ ಮೇಲೆ ಉಗ್ರಾಣ ಪಾಲಕನಿಗೆ ಮನವರಿಕೆಯಾದರೆ ಅಂಥ ಪ್ರಕರಣದಲ್ಲಿ ನೋಟೀಸು ನೀಡಬೇಕಾದ ಅಗತ್ಯ ಇರತಕ್ಕದ್ದಲ್ಲ.

(7) ವರ್ಗಾವಣೀಯ ಉಗ್ರಾಣ ರಸೀದಿಗಳ ಧಾರಕರಿಗೆ ನಷ್ಟವಾಗುವುದನ್ನು ತಡೆಯುವ ಸಲುವಾಗಿ ಮತ್ತು ಅವರಿಂದ ಸೂಚನೆಗಳನ್ನು ಪಡೆಯಲು ತನಗೆ ಸಾಕಷ್ಟು ಕಾಲಾವಕಾಶ ಇಲ್ಲದಿರುವ ಸಂದರ್ಭದಲ್ಲಿ ಈ ಬಗ್ಗೆ ವಿನಿಯಮಗಳಿಗೆ ಒಳಪಟ್ಟು ಸರಕುಗಳನ್ನು ಅಥವಾ ಅವುಗಳ ಯಾವುದೇ ಭಾಗವನ್ನು ವಿಲೇ ಮಾಡುವುದು ಅವಶ್ಯಕ ಎನ್ನಿಸಬಹುದಾದಷ್ಟರ ಮಟ್ಟಿಗೆ ಯಾವುದೇ ಸದೃಶ ಸರಕುಗಳ ಅಥವಾ ಅವುಗಳ ಯಾವುದೇ ಭಾಗದ ಗುಣಮಟ್ಟವು ಕ್ಷೀಣಿಸಿದೆ ಅಥವಾ ಕ್ಷೀಣಿಸುತ್ತಿದೆ ಎಂದು ಯಾವುದೇ ಕಾಲದಲ್ಲಿ ಉಗ್ರಾಣ ಪಾಲಕನಿಗೆ ಮನವರಿಕೆಯಾದರೆ ಅವನು ಆ ಸರಕುಗಳನ್ನು ಅಥವಾ ಅವುಗಳ ಯಾವುದೇ ಭಾಗವನ್ನು ವಿಲೇ ಮಾಡಬಹುದು ಮತ್ತು ಮಾರಾಟದಿಂದ ಬಂದ ಹಣದಲ್ಲಿ ತನಗೆ ಬರಬೇಕಾದ ಹಣವನ್ನು ಮುರಿದುಕೊಂಡ ನಂತರ ಉಳಿದ ಹಣವನ್ನು ರಸೀದಿಗಳ ಧಾರಕರ ಪ್ರಯೋಜನಕ್ಕಾಗಿ ಎಸ್ಕ್ರೋ ಖಾತೆಯಲ್ಲಿ ಇಡಬಹುದು.

(8) ಉಪ-ಪ್ರಕರಣ (7)ರ ಮೇರೆಗೆ ತತ್ಸದೃಶ ಸರಕುಗಳನ್ನು ವಿಲೆ ಮಾಡಿದ ಸಂದರ್ಭದಲ್ಲಿ, ಉಗ್ರಾಣ ಪಾಲಕನು, ರಸೀದಿಯ ಧಾರಕನ ಆಯ್ಕೆಯಂತೆ ಮಾರಾಟದಿಂದ ಬಂದ ಹಣವನ್ನು ಅವನಿಗೆ ಸಂದಾಯ ಮಾಡಬಹುದು ಅಥವಾ ಅದೇ ದರ್ಜೆಯ ಅದೇ ಗುಣಮಟ್ಟದ ಮತ್ತು ಅಷ್ಟೇ ಪರಿಮಾಣದ, ಅಷ್ಟೇ ಸರಕುಗಳನ್ನು ಅವನ ವಶಕ್ಕೆ ಒಪ್ಪಿಸಬಹುದು.

(9) ಹಿಂಬರಹ ಪಡೆದ ಯಾರೇ ವ್ಯಕ್ತಿಯು ಸೇವೆಯನ್ನು ಪಡೆಯುವುದಕ್ಕಾಗಿ ತನ್ನ ವಿಳಾಸವನ್ನು ಉಗ್ರಾಣ ಪಾಲಕನಿಗೆ ತಿಳಿಸುವ ಹಕ್ಕನ್ನು ಹೊಂದಿರತಕ್ಕದ್ದು ಮತ್ತು ಆ ವಿಳಾಸವನ್ನು ಉಗ್ರಾಣಪಾಲಕನು ದಾಖಲಿಸಿ ಇಟ್ಟುಕೊಳ್ಳತಕ್ಕದ್ದು.

**10. ಸರಕುಗಳ ಮೇಲೆ ಉಗ್ರಾಣ ಪಾಲಕನ ಧಾರಣಾಧಿಕಾರ.**- (1) ಪ್ರತಿಯೊಬ್ಬ ಉಗ್ರಾಣ ಪಾಲಕನು, ದಾಸ್ತಾನು ಮಾಡುವುದಕ್ಕಾಗಿ ತನಗೆ ಒಪ್ಪಿಸಿದ ಸರಕುಗಳನ್ನು, ಸರಕುಗಳ ಮಾಲೀಕನೇ ಒಪ್ಪಿಸಿರಲಿ ಅಥವಾ ಅವನು ನೀಡಿದ ಅಧಿಕಾರದ ಮೇರೆಗೆ ಒಪ್ಪಿಸಿರಲಿ ಅಥವಾ ಮಾಲೀಕನು ಅಥವಾ ಅವನ ಏಜೆಂಟನು ಸರಕುಗಳ ಸ್ವಾಧೀನವನ್ನು ಯಾವ ವ್ಯಕ್ತಿಗೆ ವಹಿಸಿರುವನೋ ಆ ಯಾರೇ ವ್ಯಕ್ತಿಯು ಒಪ್ಪಿಸಿರಲಿ ಆ ಸರಕುಗಳ ಮೇಲೆ ಧಾರಣಾಧಿಕಾರವನ್ನು ಹೊಂದಿರತಕ್ಕದ್ದು.

(2) ಉಗ್ರಾಣ ಪಾಲಕನ ಧಾರಣಾಧಿಕಾರವು,-

(ಎ) ಸರಕುಗಳ ದಾಸ್ತಾನಿಗಾಗಿ ಮತ್ತು ಸಂರಕ್ಷಣೆಗಾಗಿ ವಿಧಿಸುವ ಕಾನೂನುಬದ್ಧವಾದ ಎಲ್ಲಾ ವೆಚ್ಚಗಳು;

(ಬಿ) (i) ಈ ಅಧಿನಿಯಮದ ಉಪಬಂಧಗಳ ಮೇರೆಗೆ ನೀಡಲೇಬೇಕಾದ ಯಾವುದೇ ನೋಟೀಸಿಗೆ;

(ii) ಮಾರಾಟದ ನೋಟೀಸಿಗೆ ಮತ್ತು ಜಾಹೀರಾತಿಗೆ;

(iii) ಉಗ್ರಾಣ ಪಾಲಕನಿಗೆ ಸಂದಾಯ ಮಾಡಬೇಕಾದ ಹಣವನ್ನು ಸಂದಾಯ ಮಾಡಲು ತಪ್ಪಿದ ಸಂದರ್ಭದಲ್ಲಿ ಸರಕುಗಳನ್ನು ಮಾರಾಟ ಮಾಡುವುದಕ್ಕೆ; ಮತ್ತು

(iv) ಶಾಸನಾತ್ಮಕ ಉಪಬಂಧಗಳ ಪಾಲನೆಗೆ

- ಸಂಬಂಧಿಸಿದ ಎಲ್ಲಾ ಯುಕ್ತ ವೆಚ್ಚಗಳು ಸೇರಿದಂತೆ, ಸರಕುಗಳ ದಾಸ್ತಾನಿಗೆ ಮತ್ತು ನಿರ್ವಹಣೆಗೆ ತಗಲುವ ಮೊಬಲಗಿಗೆ ಸಂಬಂಧಿಸಿರುತ್ತದೆ.

(3) ವರ್ಗಾವಣೀಯ ಉಗ್ರಾಣ ರಸೀದಿಯ ಮೇಲೆ ಬ್ಯಾಂಕ್ ಅಥವಾ ಉಗ್ರಾಣ ಪಾಲಕನು, ಯಾವುದೇ ಹಿಂಬರಹ ಮಾಡಿರುವ ಸಂದರ್ಭದಲ್ಲಿ, ಆ ಹಿಂಬರಹವು ಒತ್ತೆ ಇಟ್ಟಿರುವುದಕ್ಕೆ ಸಾಕ್ಷ್ಯವಾಗಿರತಕ್ಕದ್ದು ಮತ್ತು ಒತ್ತೆ ಇಟ್ಟುಕೊಂಡವನು ರಸೀದಿಯ ಧಾರಕನ ಹಿತಾಸಕ್ತಿಗಿಂತ ಹೆಚ್ಚಿನ ಆದ್ಯತೆಯನ್ನು ಹೊಂದಿರತಕ್ಕದ್ದು.

(4) ಉಪ-ಪ್ರಕರಣ (3)ರಲ್ಲಿ ಉಲ್ಲೇಖಿಸಿದ ಯಾವುದೇ ಒತ್ತೆಯ ಸಂದರ್ಭದಲ್ಲಿ, ಉಗ್ರಾಣ ಪಾಲಕನು, ಒತ್ತೆಯ ಹಿಂಬರಹವನ್ನು ಅಧಿಕೃತವಾಗಿ ರದ್ದುಪಡಿಸಿಕೊಂಡ ಹೊರತು ಸರಕುಗಳನ್ನು ವಶಕ್ಕೆ ಒಪ್ಪಿಸತಕ್ಕದ್ದಲ್ಲ.

(5) ಸರಕುಗಳನ್ನು ಎಷ್ಟು ಅವಧಿಯವರೆಗೆ ಅವುಗಳನ್ನು ದಾಸ್ತಾನು ಮಾಡುವುದಾಗಿ ಘೋಷಿಸಲಾಗಿದೆಯೋ ಅವುಗಳನ್ನು ಆ ಅವಧಿಯೊಳಗೆ ಹಿಂದಕ್ಕೆ ಪಡೆಯದಿರುವ ಸಂದರ್ಭದಲ್ಲಿ, ಉಗ್ರಾಣ ಪಾಲಕನು ತಾನು ಯಾವ ಸರಕುಗಳ ಮೇಲೆ ಧಾರಣಾಧಿಕಾರವನ್ನು ಹೊಂದಿರುವನೋ ಆ ಯಾವುದೇ ಸರಕುಗಳನ್ನು ಬಹಿರಂಗ ಹರಾಜಿನ ಮೂಲಕ ಅಥವಾ ಈ ಪ್ರಕರಣದಲ್ಲಿ ಉಪಬಂಧಿಸಿದ ಇತರೇ ಯಾವುದೇ ರೀತಿಯಲ್ಲಿ ಮಾರಾಟ ಮಾಡಿ ತನ್ನ ವೆಚ್ಚಗಳನ್ನು ವಸೂಲಿ ಮಾಡಿಕೊಳ್ಳುವ ಹಕ್ಕನ್ನು ಹೊಂದಿರತಕ್ಕದ್ದು.

(6) ಉಗ್ರಾಣ ಪಾಲಕನು, ಯಾವ ವೆಚ್ಚಗಳಿಗೆ ಸಂಬಂಧಿಸಿದಂತೆ ಧಾರಣಾಧಿಕಾರ ಇದೆಯೊ, ಆ ವೆಚ್ಚಗಳಿಗೆ ಸಾಲಗಾರನಾಗಿ ಹಾಗೆ ಹೊಣೆಗಾರನಾಗಿರುವ ವ್ಯಕ್ತಿಗೆ ಅಥವಾ ಸರಕುಗಳ ಮಾಲೀಕನಿಗೆ ಅಥವಾ ಸರಕುಗಳ ಸ್ವಾಮ್ಯದ ಹಕ್ಕನ್ನು ಹೊಂದಿರುವ ವ್ಯಕ್ತಿಗೆ ಸರಕುಗಳನ್ನು ಮಾರಾಟ ಮಾಡುವ ತನ್ನ ಆಶಯವನ್ನು ತಿಳಿಸಿ ಲಿಖಿತ ನೋಟೀಸನ್ನು ನೀಡತಕ್ಕದ್ದು.

(7) ಉಪ-ಪ್ರಕರಣ (6)ರ ಮೇರೆಗೆ ನೀಡುವ ನೋಟೀಸಿನಲ್ಲಿ,-

(ಎ) ಸರಕುಗಳು, ಉಗ್ರಾಣದ ಸ್ಥಳ, ದಾಸ್ತಾನು ಇಟ್ಟ ದಿನಾಂಕ, ಸರಕು ದಾಸ್ತಾನುದಾರನ ಹೆಸರು ಇವುಗಳನ್ನು ಕುರಿತ ಎಲ್ಲಾ ವಿವರಗಳು ಮತ್ತು ಉಗ್ರಾಣದಲ್ಲಿ ದಾಸ್ತಾನು ಇಟ್ಟ ಸರಕುಗಳಿಗೆ ಉಗ್ರಾಣ ಪಾಲಕನು ಕ್ಲೇಮು ಮಾಡಿರುವ ಧಾರಣಾಧಿಕಾರದ ವಿವರಣೆಯು ಒಳಗೊಂಡಿರತಕ್ಕದ್ದು; ಮತ್ತು

(ಬಿ) ನೋಟೀಸಿನಲ್ಲಿ ತಿಳಿಸಿರುವ ನಿಗದಿತ ಕಾಲದೊಳಗೆ ವೆಚ್ಚಗಳನ್ನು ಸಂದಾಯ ಮಾಡದಿದ್ದರೆ ಸರಕುಗಳ ಮಾರಾಟಕ್ಕೆ ಜಾಹೀರಾತು ನೀಡಲಾಗುವುದೆಂದು ಮತ್ತು ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಕಾಲದಲ್ಲಿ ಮತ್ತು ಸ್ಥಳದಲ್ಲಿ ಬಹಿರಂಗ ಹರಾಜಿನ ಮೂಲಕ ಅವುಗಳನ್ನು ಮಾರಾಟ ಮಾಡಲಾಗುತ್ತದೆ ಎಂದು ತಿಳಿಸತಕ್ಕದ್ದು.

(8) ನೋಟೀಸಿನಲ್ಲಿ ತಿಳಿಸಿದ ದಿನದಂದು ಅಥವಾ ಅದಕ್ಕೂ ಮುಂಚೆ ವೆಚ್ಚಗಳನ್ನು ಸಂದಾಯ ಮಾಡದಿದ್ದರೆ, ಆಗ ಪ್ರಾಧಿಕಾರವು ವಿನಿಯಮಗಳ ಮೂಲಕ ಮಾರಾಟದ ಯಾವುದೇ ಇತರ ವಿಧಾನವನ್ನು ನಿರ್ದಿಷ್ಟಪಡಿಸಿದ ಹೊರತು, ಸರಕುಗಳನ್ನು ಯಾವ ಸ್ಥಳದಲ್ಲಿ ಮಾರಾಟವಾಗುವುದೋ, ಸರಕುಗಳ ಮಾಲೀಕನು ಯಾವ ಸ್ಥಳದಲ್ಲಿ ಇರುವನೋ ಆ ಸ್ಥಳದಲ್ಲಿ ಹೆಚ್ಚು ಪ್ರಸಾರವುಳ್ಳ ಪ್ರಮುಖ ದಿನಪತ್ರಿಕೆಯಲ್ಲಿ ಮಾರಾಟದ ಜಾಹೀರಾತನ್ನು ಪ್ರಕಟಿಸತಕ್ಕದ್ದು ಮತ್ತು ಜಾಹೀರಾತು ಮೊದಲು ಪ್ರಕಟವಾದ ದಿನಾಂಕದಿಂದ ಹದಿನಾಲ್ಕು ದಿನಗಳಾದ ಮೇಲೆ ಮಾರಾಟ ಮಾಡತಕ್ಕದ್ದು.

(9) ಉಗ್ರಾಣ ಪಾಲಕನು, ಮಾರಾಟದಿಂದ ಬಂದ ಹಣದಲ್ಲಿ, ತನಗೆ ಬರಬೇಕಾದ ಹಣವನ್ನು ಮುರಿದುಕೊಳ್ಳತಕ್ಕದ್ದು ಮತ್ತು ಹಣವೇನಾದರೂ ಉಳಿದಿದ್ದರೆ ಅದನ್ನು ಅದಕ್ಕೆ ಹಕ್ಕುಳ್ಳ ವ್ಯಕ್ತಿಗೆ ಸಂದಾಯ ಮಾಡತಕ್ಕದ್ದು.

(10) ಹೆಚ್ಚುವರಿ ಹಣಕ್ಕೆ ಹಕ್ಕುಳ್ಳ ವ್ಯಕ್ತಿಯು ಅದನ್ನು ಕೊಡುವಂತೆ ಸರಕುಗಳ ಮಾರಾಟದ ನಂತರ ಹತ್ತು ದಿನಗಳೊಳಗೆ ತಗಾದೆ ಮಾಡದಿದ್ದರೆ ಅಥವಾ ಬೇರೆ ಕ್ಲೇಮುಗಳು ಇದ್ದರೆ, ಉಗ್ರಾಣ ಪಾಲಕನು ಪ್ರಾಧಿಕಾರದಿಂದ ಸೂಚನೆಗಳನ್ನು ಕೋರತಕ್ಕದ್ದು ಮತ್ತು ಪ್ರಾಧಿಕಾರದ ಆದೇಶಗಳ ಪ್ರಕಾರ ಕ್ರಮ ಕೈಗೊಳ್ಳತಕ್ಕದ್ದು.

## ಅಧ್ಯಾಯ – IV

## ಉಗ್ರಾಣ ರಸೀದಿಗಳು

11. **ಉಗ್ರಾಣ ರಸೀದಿಗಳು.–** (1) ಲಿಖಿತರೂಪದಲ್ಲಿ ಅಥವಾ ವಿದ್ಯುನ್ಮಾನ ರೂಪದಲ್ಲಿ ಇರಬಹುದಾದಂಥ ಉಗ್ರಾಣ ರಸೀದಿಯು ಈ ಮುಂದಿನ ಎಲ್ಲಾ ವಿವರಗಳನ್ನು ಒಳಗೊಂಡಿದ್ದರೆ ಅದು ಲಿಖಿತ ರೂಪದಲ್ಲಿರುವ ಸರಕು ಸ್ವಾಮ್ಯದ ದಾಖಲೆಯಾಗಿರತಕ್ಕದ್ದು, ಎಂದರೆ:–

(ಎ) ರಸೀದಿಯ ಸಂಖ್ಯೆ;

(ಬಿ) ಉಗ್ರಾಣದ ನೋಂದಣಿ ಸಂಖ್ಯೆ ಮತ್ತು ಅದು ಯಾವ ದಿನಾಂಕದವರೆಗೆ ಸಿಂಧುವಾಗಿರುತ್ತದೋ ಆ ದಿನಾಂಕ;

(ಸಿ) ಉಗ್ರಾಣದ ಹೆಸರು ಮತ್ತು ಅದರ ಪೂರ್ಣ ಅಂಚೆ ವಿಳಾಸ;

(ಡಿ) ಸರಕುಗಳನ್ನು ಯಾವ ವ್ಯಕ್ತಿಯು ದಾಸ್ತಾನು ಇಟ್ಟಿರುವನೋ ಅಥವಾ ಯಾರ ಪರವಾಗಿ ದಾಸ್ತಾನು ಇಡಲಾಗಿದೆಯೋ ಆ ವ್ಯಕ್ತಿಯ ಹೆಸರು ಮತ್ತು ವಿಳಾಸ;

(ಇ) ಉಗ್ರಾಣ ರಸೀದಿಯನ್ನು ನೀಡಿದ ದಿನಾಂಕ;

(ಎಫ್) ಸ್ವೀಕರಿಸಿದ ಸರಕುಗಳನ್ನು ಅವುಗಳ ಧಾರಕನ ವಶಕ್ಕೆ ಒಪ್ಪಿಸಲಾಗುವುದೆಂಬ ಅಥವಾ ಹೆಸರಿಸಿದ ವ್ಯಕ್ತಿಯ ಆದೇಶದ ಅನ್ವಯ ಸರಕುಗಳನ್ನು ವಶಕ್ಕೆ ಒಪ್ಪಿಸಲಾಗುವುದೆಂಬ ವಿವರಣೆ;

(ಜಿ) ದಾಸ್ತಾನು ವೆಚ್ಚಗಳ ಮತ್ತು ನಿರ್ವಹಣಾ ವೆಚ್ಚಗಳ ದರಗಳು;

(ಹೆಚ್) ಸರಕುಗಳ ಪರಿಮಾಣ ಮತ್ತು ಗುಣಮಟ್ಟ ಅಥವಾ ದರ್ಜೆಯ ವಿವರಗಳ ಸಹಿತ ಸರಕುಗಳ ಅಥವಾ ಅವುಗಳು ಇರುವ ಪ್ಯಾಕೇಜುಗಳ ವರ್ಣನೆ;

(ಐ) ದಾಸ್ತಾನು ಮಾಡಿದ ಸಮಯದಲ್ಲಿ ಸರಕುಗಳ ಮಾರುಕಟ್ಟೆ ಮೌಲ್ಯ;

(ಜೆ) ಸದೃಶ ಸರಕುಗಳಾಗಿದ್ದ ಹೊರತು ಸರಕುಗಳ ದಾಸ್ತಾನುಗಾರನು ಸರಕುಗಳ ಮೇಲೆ ಅಥವಾ ಪ್ಯಾಕೇಜ್‌ಗಳ ಮೇಲೆ ತನ್ನದೆ ಆದ ಗುರುತುಗಳನ್ನೇನಾದರೂ ಮಾಡಿದ್ದರೆ ಆ ಗುರುತುಗಳು;

(ಕೆ) ಬೆಂಕಿ, ಪ್ರವಾಹ, ಕಳ್ಳತನ, ಕನ್ನಗಳ್ಳತನ, ದುರುಪಯೋಗ, ಗಲಭೆಗಳು, ಮುಷ್ಕರಗಳು ಅಥವಾ ಭಯೋತ್ಪಾದನೆಯಿಂದಾಗಿ ಆದ ನಷ್ಟವನ್ನು ತುಂಬಿಕೊಡುವ ವಿಮಾ ಕಂಪನಿಯ ಹೆಸರು;

(ಎಲ್) ಉಗ್ರಾಣ ರಸೀದಿಯು ವರ್ಗಾವಣೀಯವಾದುದೇ ಅಥವಾ ವರ್ಗಾವಣೀಯವಾದುದಲ್ಲವೇ;

(ಎಂ) ಮುಂಗಡವಾಗಿ ನೀಡಿದ ಯಾವುದೇ ಮೊಬಲಗಿನ ಮತ್ತು ವಹಿಸಿದ ಯಾವ ಹೊಣೆಗಾರಿಕೆಗಾಗಿ ಉಗ್ರಾಣ ಪಾಲಕನು ತನ್ನ ಧಾರಣಾಧಿಕಾರವನ್ನು ಕ್ಲೇಮು ಮಾಡಿರುವನೋ ಆ ಹೊಣೆಗಾರಿಕೆಯ ವಿವರಣೆ;

(ಎನ್) ಉಗ್ರಾಣ ಪಾಲಕನ ಅಥವಾ ಅವನ ಅಧಿಕೃತ ಏಜೆಂಟನ ಸಹಿ ಮತ್ತು ದಿನಾಂಕ;

(ಓ) ಸರಕುಗಳ ಘೋಷಿತ ತಾಳಿಕೆ ಅವಧಿ;

(ಪಿ) ತನ್ನಲ್ಲಿ ದಾಸ್ತಾನು ಇಟ್ಟುಕೊಳ್ಳುವುದಕ್ಕಾಗಿ ಒಪ್ಪಿಸಿದ ಸರಕುಗಳ ಮೇಲೆ ಉಗ್ರಾಣ ಪಾಲಕನು ಧಾರಣಾಧಿಕಾರವನ್ನು ಹೊಂದಿರುವನೆಂಬ ಸಂಗತಿ ಮತ್ತು ನಿರ್ವಹಣಾ ವೆಚ್ಚಗಳು; ಮತ್ತು

(ಕ್ಯೂ) ರಸೀದಿಯನ್ನು ಯಾವ ಸರಕುಗಳಿಗೆ ಸಂಬಂಧಿಸಿದಂತೆ ನೀಡಲಾಗಿದೆಯೋ ಆ ಸರಕುಗಳ ಘೋಷಿತ ತಾಳಿಕೆ ಅವಧಿಯು ಮುಕ್ತಾಯವಾಗುವ ದಿನಾಂಕದವರೆಗೆ ಮಾತ್ರ ರಸೀದಿಯು ಸಿಂಧುವಾಗಿರುವುದು.

(2) ಉಪ–ಪ್ರಕರಣ (1)ರಲ್ಲಿ ನಿರೂಪಿಸಿರುವ ಯಾವುದೇ ವಿವರವನ್ನು ವರ್ಗಾವಣೀಯ ಉಗ್ರಾಣ ರಸೀದಿಯಿಂದ ಉಗ್ರಾಣ ಪಾಲಕನು ಉದ್ದೇಶಪೂರ್ವಕವಾಗಿ ಬಿಟ್ಟುಬಿಟ್ಟಿರುವ ಸಂದರ್ಭದಲ್ಲಿ, ಅವನು ಹಾಗೆ ಬಿಟ್ಟುಬಿಟ್ಟಿದ್ದರಿಂದ ಉಂಟಾದ ಹಾನಿಗಳಿಗೆ ಹೊಣೆಗಾರನಾಗಿರತಕ್ಕದ್ದು.

(3) ಉಪ–ಪ್ರಕರಣ (1)ರಲ್ಲಿ ನಿರೂಪಿಸಿರುವ ಯಾವುದೇ ವಿವರವನ್ನು ಬಿಟ್ಟುಬಿಟ್ಟಿರುವ ಕಾರಣ ಮಾತ್ರದಿಂದಲೇ ಯಾವುದೇ ಉಗ್ರಾಣ ರಸೀದಿಯು ವಿವಾದಗಳ ಅಥವಾ ಕ್ಲೇಮುಗಳ ಇತ್ಯರ್ಥದ ಉದ್ದೇಶಕ್ಕಾಗಿ ಅಸಿಂಧುವಾದುದಾಗುತ್ತದೆಂದು ಭಾವಿಸತಕ್ಕದ್ದಲ್ಲ.

(4) ಪ್ರಾಧಿಕಾರವು, ಕೇಂದ್ರ ಸರ್ಕಾರದ ಪೂರ್ವಾನುಮೋದನೆ ಪಡೆದು, ಎಲ್ಲಾ ಅಥವಾ ಯಾವುದೇ ಸರಕಿಗೆ ಅಥವಾ ಸರಕುಗಳ ವರ್ಗಕ್ಕೆ ಅಥವಾ ಉಗ್ರಾಣಗಳ ಯಾವುದೇ ವರ್ಗಕ್ಕೆ, (1)ನೇ ಉಪ–ಖಂಡದಲ್ಲಿ ನಿರ್ದಿಷ್ಟಪಡಿಸಿದಂತಹ ಯಾವುವೇ ವಿವರಗಳನ್ನು ಸೇರಿಸಬಹುದು, ಅದರಿಂದ ತೆಗೆದುಹಾಕಬಹುದು ಅಥವಾ ಅದರಲ್ಲಿ ಮಾರ್ಪಾಟು ಮಾಡಬಹುದು.

12. **ಉಗ್ರಾಣ ರಸೀದಿಗಳ ವರ್ಗಾವಣೀಯತೆ.–** (1) ವರ್ಗಾವಣೀಯ ಉಗ್ರಾಣ ರಸೀದಿಯಲ್ಲಿ ಬಳಸಿರುವ, ಅದರ ವರ್ಗಾವಣೀಯತೆಯನ್ನು ಸೀಮಿತಗೊಳಿಸುವ ಪದಗಳು ಅನೂರ್ಜಿತವಾಗತಕ್ಕದ್ದು.

(2) ವರ್ಗಾವಣೀಯವಲ್ಲದ ಉಗ್ರಾಣ ರಸೀದಿಯನ್ನು ನೀಡುವ ಉಗ್ರಾಣ ಪಾಲಕನು, ಆ ರಸೀದಿಯ ಮೇಲೆ ಇಂಗ್ಲೀಷ್‌ನಲ್ಲಿ "ನಾನ್‌ನೆಗೋಷಿಯಬಲ್" ಅಥವಾ "ನಾಟ್‌ನೆಗೋಷಿಯೆಬಲ್" ಎಂಬ ಪದಾವಳಿಗಳನ್ನು ಅಥವಾ ರಸೀದಿಯನ್ನು ಯಾವ ಭಾಷೆಯಲ್ಲಿ ನೀಡಲಾಗಿದೆಯೋ ಆ ಭಾಷೆಯಲ್ಲಿನ ಪದಾವಳಿಗಳನ್ನು ಸ್ಪಷ್ಟವಾಗಿ ಬರೆಸತಕ್ಕದ್ದು.

(3) ಉಪ–ಪ್ರಕರಣ (2)ನ್ನು ಪಾಲಿಸದಿರುವ ಸಂದರ್ಭದಲ್ಲಿ, ರಸೀದಿಯು ವರ್ಗಾವಣೀಯ ಉಗ್ರಾಣ ರಸೀದಿ ಎಂದು ನಂಬಿ ಅದನ್ನು ಅಮೂಲ್ಯ ಪ್ರತಿಫಲಕ್ಕೆ ಖರೀದಿಸುವ ಉಗ್ರಾಣ ರಸೀದಿಯ ಧಾರಕನು, ತನ್ನ ಇಚ್ಛೆಯ ಮೇರೆಗೆ, ವರ್ಗಾವಣೀಯ ಉಗ್ರಾಣ ರಸೀದಿಯಲ್ಲಿರುವ ಎಲ್ಲಾ ಹಕ್ಕುಗಳು ತನ್ನಲ್ಲಿ ನಿಹಿತಗೊಳ್ಳುತ್ತದೆ ಎಂದು ಮತ್ತು ರಸೀದಿಯು ವರ್ಗಾವಣೀಯ ಉಗ್ರಾಣ ರಸೀದಿಯಾಗಿದ್ದಿದ್ದರೆ ಉಗ್ರಾಣ ಪಾಲಕನು ಯಾವ ಹೊಣೆಗಾರಿಕೆಗಳನ್ನು ವಹಿಸಿಕೊಳ್ಳುತ್ತಿದ್ದನೋ ಅವೇ ಹೊಣೆಗಾರಿಕೆಗಳನ್ನು ಉಗ್ರಾಣ ಪಾಲಕನ ಮೇಲೆ ವಿಧಿಸುತ್ತವೆ ಎಂದು ಪರಿಗಣಿಸತಕ್ಕದ್ದು ಮತ್ತು ಉಗ್ರಾಣ ಪಾಲಕನು ತದನುಸಾರವಾಗಿ ಹೊಣೆಗಾರನಾಗಿರತಕ್ಕದ್ದು.

(4) ವರ್ಗಾವಣೀಯ ಉಗ್ರಾಣ ರಸೀದಿಯು, ಸರಕುಗಳ ಯಾವ ಘೋಷಿತ ತಾಳಿಕೆ ಅವಧಿಗೆ ರಸೀದಿಯನ್ನು ನೀಡಲಾಗಿದೆಯೋ, ಆ ಘೋಷಿತ ತಾಳಿಕೆ ಅವಧಿಯು ಮುಕ್ತಾಯವಾಗುವ ದಿನಾಂಕದವರೆಗೆ ಒಪ್ಪಿಸಲು ಸಿಂಧುವಾದುದಾಗಿರತಕ್ಕದ್ದು.

13. **ಒಪ್ಪಿಸುವ ಮೂಲಕ ಉಗ್ರಾಣ ರಸೀದಿಯ ವರ್ಗಾವಣೆ.–** ವರ್ಗಾವಣೀಯ ಉಗ್ರಾಣ ರಸೀದಿಯ ನಿಬಂಧನೆಗಳಿಗೆ ಅನುಸಾರವಾಗಿ ತಾನು ಹೆಸರಿಸಿದ ವ್ಯಕ್ತಿಯ ಆದೇಶದ ಪ್ರಕಾರ ಸರಕುಗಳನ್ನು ವಶಕ್ಕೆ ಒಪ್ಪಿಸುವುದಾಗಿ ಉಗ್ರಾಣ ಪಾಲಕನು ವಾಗ್ದಾನ ಮಾಡಿದ್ದರೆ ಮತ್ತು ಆ ವ್ಯಕ್ತಿಯು ಅಥವಾ ತರುವಾಯ ಹಿಂಬರಹ ಪಡೆದವನು ಅದಕ್ಕೆ ಒಪ್ಪಿಕೊಂಡಿದ್ದರೆ ಆ ರಸೀದಿಯನ್ನು ಒಪ್ಪಿಸುವ ಮೂಲಕ ವರ್ಗಾವಣೆ ಮಾಡಬಹುದು.

14. **ಹಿಂಬರಹ ಮಾಡದೆಯೇ ವರ್ಗಾವಣೀಯ ಉಗ್ರಾಣ ರಸೀದಿಗಳ ವರ್ಗಾವಣೆ.–** ಮೌಲಿಕ ಪ್ರತಿಫಲಕ್ಕಾಗಿ ವರ್ಗಾವಣೀಯ ರಸೀದಿಯನ್ನು ಒಪ್ಪಿಸುವ ಮೂಲಕ ವರ್ಗಾಯಿಸಿದ್ದರೆ ಮತ್ತು ವರ್ಗಾವಣೆಗಾಗಿ ವರ್ಗಾವಣೆ ಮಾಡುವವನ ಹಿಂಬರಹವು ಅಗತ್ಯವಾಗಿದ್ದರೆ, ವರ್ಗಾವಣೆ ಪಡೆದವನು, ತದ್ವಿರುದ್ಧ ಉದ್ದೇಶವು ಇರುವುದು ಕಂಡು ಬಂದ ಹೊರತು, ರಸೀದಿ ಮೇಲೆ ಹಿಂಬರಹ ಮಾಡಲು ವರ್ಗಾವಣೆ ಮಾಡುವವನು ಒತ್ತಾಯಿಸುವ ಹಕ್ಕನ್ನು ಪಡೆದುಕೊಳ್ಳುತ್ತಾನೆ ಮತ್ತು ಹಿಂಬರಹ ಮಾಡಿದಾಗ ವರ್ಗಾವಣೀಯು ಜಾರಿಗೆ ಇರುತ್ತದೆ.

15. **ಉಗ್ರಾಣ ರಸೀದಿಯ ವರ್ಗಾವಣೆಗೆ ಭರವಸೆಯ ಪತ್ರಗಳು.–** ಉಗ್ರಾಣ ರಸೀದಿಯನ್ನು ಮೌಲಿಕ ಪ್ರತಿಫಲಕ್ಕಾಗಿ, ಹಿಂಬರಹದ ಮೂಲಕ ಮತ್ತು ಒಪ್ಪಿಸುವ ಮೂಲಕ ವರ್ಗಾವಣೆ ಮಾಡುವ ವ್ಯಕ್ತಿಯು ಹಾಗೂ ಅಂಥ ರಸೀದಿಯಿಂದ ಪ್ರಾಪ್ತವಾಗುವ ಕ್ಲೇಮನ್ನು ಮೌಲಿಕ ಪ್ರತಿಫಲಕ್ಕಾಗಿ ಹಸ್ತಾಂತರಣ ಮಾಡುವ ವ್ಯಕ್ತಿಯೂ ಸಹ, ತದ್ವಿರುದ್ಧವಾದ ಉದ್ದೇಶ ಕಂಡು ಬಂದ ಹೊರತು, ಈ ಕೆಳಕಂಡಂತೆ ಭರವಸೆಗಳನ್ನು ಎಂದರೆ:–

(ಎ) ರಸೀದಿಯು ನೈಜವಾದುದು ಎಂದು;

(ಬಿ) ವರ್ಗಾವಣೆ ಮಾಡಲು ಅಥವಾ ಹಸ್ತಾಂತರ ಮಾಡಲು ವ್ಯಕ್ತಿಗೆ ಕಾನೂನುಬದ್ಧ ಹಕ್ಕು ಇದೆ ಎಂದು;

(ಸಿ) ರಸೀದಿಯ ಸಿಂಧುತ್ವಕ್ಕೆ ಧಕ್ಕೆ ಉಂಟು ಮಾಡುವ ಯಾವುದೇ ಸಂಗತಿಯು ವ್ಯಕ್ತಿಯ ತಿಳುವಳಿಕೆಗೆ ಬಂದಿಲ್ಲ ಎಂದು;

(ಡಿ) ಸರಕುಗಳ ಸ್ವಾಮ್ಯವನ್ನು ವರ್ಗಾವಣೆ ಮಾಡುವ ಹಕ್ಕು ವ್ಯಕ್ತಿಗೆ ಇದೆ ಎಂದು; ಮತ್ತು

(ಇ) ಕರಾರಿನಲ್ಲಿ ಹೇಳಿರುವ ಸರಕುಗಳನ್ನು ರಸೀದಿ ಇಲ್ಲದೆಯೇ ವರ್ಗಾವಣೆ ಮಾಡಲು ಪಕ್ಷಕಾರರು ಕರಾರು ಮಾಡಿಕೊಂಡಿದ್ದರೆ ಆ ಕರಾರಿನಲ್ಲಿ ಭರವಸೆಗಳು ಅಂತರ್ನಿಹಿತವಾಗಿರುವಾಗ ಸರಕುಗಳು ವಾಣಿಜ್ಯ ಯೋಗ್ಯವಾದವುಗಳು ಎಂದು ಅಥವಾ ಒಂದು ನಿರ್ದಿಷ್ಟ ಉದ್ದೇಶಕ್ಕೆ ಉಪಯುಕ್ತವಾದವುಗಳು ಆಗಿವೆ ಎಂದು

– ಭರವಸೆ ನೀಡುತ್ತಾನೆ.

16. **ಹಿಂಬರಹ ಮಾಡಿದವನಿಗೆ ಹೊಣೆಗಾರಿಕೆ ಇರಬೇಕಾಗಿಲ್ಲದಿರುವುದು.–** ರಸೀದಿ ಮೇಲಿನ ಹಿಂಬರಹವು ಹಿಂಬರಹ ಮಾಡಿದವನನ್ನು ಉಗ್ರಾಣ ಪಾಲಕನು ಅಥವಾ ಈ ಮೊದಲು ರಸೀದಿಯ ಮೇಲೆ ಹಿಂಬರಹ ಮಾಡಿದವರು ರಸೀದಿಗೆ ಸಂಬಂಧಪಟ್ಟಂತೆ ತಮ್ಮ ತಮ್ಮ ಬಾಧ್ಯತೆಗಳನ್ನು ಈಡೇರಿಸುವಲ್ಲಿ ಆಗುವ ಯಾವುದೇ ರೀತಿಯ ವಿಫಲತೆಗೆ ಹೊಣೆಗಾರನನ್ನಾಗಿ ಮಾಡುವುದಿಲ್ಲ.

17. **ಮೋಸದಿಂದಾಗಿ, ತಪ್ಪಿನಿಂದಾಗಿ ಅಥವಾ ಒತ್ತಾಯದಿಂದಾಗಿ ಉಗ್ರಾಣ ರಸೀದಿಯು ವರ್ಗಾವಣೆಯಾಗಿದ್ದರೆ ಅದರ ಸಿಂಧುತ್ವಕ್ಕೆ ಧಕ್ಕೆಯಾಗದಿರುವುದು.–**

(ಎ) ವರ್ಗಾವಣೆಯು, ವರ್ಗಾವಣೆಯನ್ನು ಮಾಡುವ ವ್ಯಕ್ತಿಯಿಂದ ಆದ ಕರ್ತವ್ಯದ ಉಲ್ಲಂಘನೆಯಿಂದಾಗಿ ಆದುದೆಂಬ; ಅಥವಾ

(ಬಿ) ಯಾವ ಆ ವ್ಯಕ್ತಿಗೆ ರಸೀದಿಯನ್ನು ವರ್ಗಾವಣೆ ಮಾಡಲಾಗಿದೆಯೋ ಆ ವ್ಯಕ್ತಿಯು ಅಥವಾ ಯಾವ ಆ ವ್ಯಕ್ತಿಗೆ ರಸೀದಿಯನ್ನು ತರುವಾಯ ವರ್ಗಾವಣೆ ಮಾಡಲಾಗಿದೆಯೋ ಆ ವ್ಯಕ್ತಿಯು, ಕರ್ತವ್ಯದಲ್ಲಿ ಉಲ್ಲಂಘನೆ ಆಗಿರುವುದು, ತಪ್ಪು ಆಗಿರುವುದು ಅಥವಾ ಒತ್ತಾಯ ಆಗಿರುವುದು ಗೊತ್ತಿಲ್ಲದೆಯೇ ಅದಕ್ಕೆ ಮೌಲ್ಯವನ್ನು ಸಂದಾಯ ಮಾಡಿದ್ದರೆ, ಆ ವ್ಯಕ್ತಿಗೆ ರಸೀದಿಯ ಮಾಲೀಕನು ಮೋಸದಿಂದ, ತಪ್ಪಿನಿಂದ ಅಥವಾ ಒತ್ತಾಯದಿಂದ ರಸೀದಿಯ ಸ್ವಾಧೀನವನ್ನು ಅಥವಾ ಅಭಿರಕ್ಷೆಯನ್ನು ವಹಿಸಿರುವನೆಂಬ

– ಸಂಗತಿಯು ರಸೀದಿಯ ವರ್ಗಾವಣೆಯ ಸಿಂಧುತ್ವಕ್ಕೆ ಧಕ್ಕೆಯಾಗುವುದಿಲ್ಲ.

18. **ಉಗ್ರಾಣ ರಸೀದಿಗಳ ತರುವಾಯದ ವರ್ಗಾವಣೆ.–** ಯಾವ ವ್ಯಕ್ತಿಯು, ಉಗ್ರಾಣ ಪಾಲಕನ ಅಭಿರಕ್ಷೆಯಲ್ಲಿರುವ ಯಾವ ಸರಕುಗಳನ್ನು ಮಾರಾಟ ಮಾಡಿರುವನೋ, ಅಡಮಾನ ಮಾಡಿರುವನೋ ಅಥವಾ ಒತ್ತೆ ಇಟ್ಟಿರುವನೋ ಮತ್ತು ಹಾಗೆ ಮಾಡಿದ್ದಕ್ಕಾಗಿ ವರ್ಗಾವಣೀಯ ರಸೀದಿಯನ್ನು ನೀಡಲಾಗಿದೆಯೋ ಆ ವ್ಯಕ್ತಿಯು ಆ ವರ್ಗಾವಣೆ ರಸೀದಿಯನ್ನು ತನ್ನ ಸ್ವಾಧೀನದಲ್ಲಿಯೇ ಇನ್ನು ಇಟ್ಟುಕೊಂಡಿದ್ದರೆ, ಮೌಲಿಕ ಪ್ರತಿಫಲಕ್ಕಾಗಿ ಮತ್ತು ಹಿಂದಿನ ಮಾರಾಟವು, ಅಡಮಾನವು ಅಥವಾ ಒತ್ತೆಯು ಗೊತ್ತಿಲ್ಲದೆಯೆ ಸದ್ಭಾವನೆಯಿಂದ ಆ ರಸೀದಿಯನ್ನು ಸೀಕರಿಸುವ ಯಾರೇ ವ್ಯಕ್ತಿಗೆ ಸರಕುಗಳ ಯಾವುದೇ ಮಾರಾಟದ ಅಥವಾ ಇತರ ವಿಲೇವಾರಿಯ ಮೂಲಕ ಆ ವ್ಯಕ್ತಿಗೆ ಆ ರಸೀದಿಯನ್ನು ತರುವಾಯ ವರ್ಗಾವಣೆ ಮಾಡಿದರೆ, ಹಾಗೆ ತರುವಾಯ ವರ್ಗಾವಣೆ ಮಾಡಿರುವುದನ್ನು ಸಂದರ್ಭಾನುಸಾರ ಹಿಂದಿನ ಖರೀದಿದಾರನು, ಅಡಮಾನಕ್ಕಿಟ್ಟುಕೊಂಡವನು, ಒತ್ತೆಯಿಟ್ಟುಕೊಂಡವನು ಅಂಥ ತರುವಾಯದ ವರ್ಗಾವಣೆಗೆ ಸ್ಪಷ್ಟವಾಗಿ ಅಧಿಕಾರ ಕೊಟ್ಟಿದಿದ್ದರೆ ಹೇಗೋ ಹಾಗೆ ಅದೇ ಪರಿಣಾಮವನ್ನು ಹೊಂದಿರುತ್ತದೆ.

19. **ಸೂಕ್ತ ವೆಚ್ಚಗಳನ್ನು ಸಂದಾಯ ಮಾಡಿದ ತರುವಾಯ ಸರಕುಗಳನ್ನು ಒಪ್ಪಿಸುವುದು.–** ಯಾವುದೇ ಸರಕುಗಳ ಸಂಬಂಧದಲ್ಲಿ ವರ್ಗಾವಣೀಯ ಉಗ್ರಾಣ ರಸೀದಿಯನ್ನು ನೀಡಿದ್ದರೆ ಉಗ್ರಾಣ ಪಾಲಕನು, ಸರಕನ್ನು ಒಪ್ಪಿಸುವ ವ್ಯಕ್ತಿಗೆ ಅಥವಾ ಹಿಂಬರಹ ಪಡೆದವನಿಗೆ ಸರಕುಗಳನ್ನು, ಆ ಸರಕುಗಳನ್ನು ಮೊದಲು ದಾಸ್ತಾನು ಇಟ್ಟ ದಿನಾಂಕದಿಂದ ಅವುಗಳನ್ನು ವಶಕ್ಕೆ ಒಪ್ಪಿಸುವ ದಿನಾಂಕದವರೆಗೆ ಸೂಕ್ತ ವೆಚ್ಚಗಳನ್ನು ಸಂದಾಯ ಮಾಡುವ ತನಕ ಮತ್ತು ರದ್ದು ಮಾಡುವುದಕೋಸ್ಕರ ಉಗ್ರಾಣ ರಸೀದಿಯನ್ನು ಒಪ್ಪಿಸುವ ತನಕ ಸರಕುಗಳನ್ನು ವಶಕ್ಕೆ ಒಪ್ಪಿಸತಕ್ಕದ್ದಲ್ಲ.

20. **ವರ್ಗಾವಣೀಯವಲ್ಲದ ರಸೀದಿಗಳ ವರ್ಗಾವಣೆ.–** (1) ವರ್ಗಾವಣೀಯವಲ್ಲದ ಉಗ್ರಾಣ ರಸೀದಿಯನ್ನು ಅದರ ಧಾರಕನು ಸರಕುಗಳ ಖರೀದಿದಾರನಿಗೆ ಅಥವಾ ದೇಣಿಗೆ ಪಡೆದವನಿಗೆ ಲಿಖಿತದಲ್ಲಿ ಬರೆದು ವಶಕ್ಕೆ ಒಪ್ಪಿಸಬಹುದು.

(2) ವರ್ಗಾವಣೀಯವಲ್ಲದ ಉಗ್ರಾಣ ರಸೀದಿಯಲ್ಲಿ ಹೇಳಿರುವ ಸರಕುಗಳನ್ನು ಯಾವ ವ್ಯಕ್ತಿಗೆ ವರ್ಗಾವಣೆ ಮಾಡಲಾಗಿದೆಯೋ ಆ ವ್ಯಕ್ತಿಗೆ,–

(ಎ) ಸರಕುಗಳ ಮೇಲೆ ವರ್ಗಾವಣೆ ಮಾಡುವವನಿಗೆ ಇದ್ದ ಸ್ವಾಮ್ಯವು; ಮತ್ತು

(ಬಿ) ಆ ರಸೀದಿಯನ್ನು ಅಥವಾ ಅದರ ನಕಲನ್ನು ಉಗ್ರಾಣ ಪಾಲಕನಿಗೆ ಒಪ್ಪಿಸುವ ಅಥವಾ ವರ್ಗಾವಣೆ ನೋಟೀಸನ್ನು ಉಗ್ರಾಣ ಪಾಲಕನಿಗೆ ಲಿಖಿತದಲ್ಲಿ ಕೊಡುವ ಹಕ್ಕು

– ಪ್ರಾಪ್ತವಾಗುತ್ತದೆ.

(3) ರಸೀದಿಯ ನಿಬಂಧನೆಗಳಿಗೆ ಅನುಸಾರವಾಗಿ ವರ್ಗಾವಣೆ ಪಡೆಯುವವನಿಗೋಸ್ಕರ ದಾಸ್ತಾನು ಇಟ್ಟುಕೊಂಡ ಸರಕುಗಳನ್ನು ಧಾರಣ ಮಾಡಲು ಉಗ್ರಾಣ ಪಾಲಕನಿಗೆ ಇರುವ ಬಾಧ್ಯತೆಯಿಂದ ವರ್ಗಾವಣೆ ಪಡೆದವನಿಗೆ, ಒದಗುವ ಪ್ರಯೋಜನವು, ವರ್ಗಾವಣೆಗೊಂಡ ಸರಕುಗಳನ್ನು ಇಟ್ಟಾಗ ಮತ್ತು ವರ್ಗಾವಣೆ ನೋಟೀಸನ್ನು ಲಿಖಿತದಲ್ಲಿ ನೀಡಿದಾಗ ಮತ್ತು ಉಗ್ರಾಣ ಪಾಲಕನಿಗೆ ವರ್ಗಾವಣೆಯನ್ನು ಪರಿಶೀಲಿಸಲು ಸಮಂಜಸ ಅವಕಾಶ ದೊರೆತಾಗ ಪ್ರಾಪ್ತವಾಗುತ್ತದೆ.

21. **ವರ್ಗಾವಣೀಯ ಉಗ್ರಾಣ ರಸೀದಿಯು ನಿರ್ಣಾಯಕ ಸಾಕ್ಷ್ಯವಾಗಿರುವುದು.–** ಮೌಲಿಕ ಪ್ರತಿಫಲಕ್ಕಾಗಿ ವರ್ಗಾವಣೀಯ ಉಗ್ರಾಣ ರಸೀದಿಯನ್ನು ಖರೀದಿಸಿರುವ ಧಾರಕನಿಗೆ, ಅದು, ಉಗ್ರಾಣ ಪಾಲಕನಿಗೆ ಅಥವಾ ಅವನ ಮೂಲಕ ಕ್ಲೇಮು ಮಾಡುವ ಯಾರೇ ವ್ಯಕ್ತಿಗೆ ಸಂಬಂಧಿಸಿದಂತೆ ಆ ರಸೀದಿಯಲ್ಲಿ ವಿವರಿಸಿರುವ ಸರಕುಗಳ ಬಗ್ಗೆ ನಿರ್ಣಾಯಕ ಸಾಕ್ಷ್ಯ ಆಗಿರತಕ್ಕದ್ದು.

22. **ಕೆಲವು ಸಂದರ್ಭಗಳಲ್ಲಿ ಪೂರ್ವಭಾವನೆ.–** ವರ್ಗಾವಣೀಯ ಉಗ್ರಾಣ ರಸೀದಿಯ ಮೇಲೆ ಹಿಂಬರಹ ಮಾಡುವವನ ಮತ್ತು ಆ ಹಿಂಬರಹವನ್ನು ಪಡೆದವನ ನಡುವಣ ವಿವಾದದಲ್ಲಿ ಅನ್ಯಥಾ ರುಜುವಾತು ಪಡಿಸಿದ ಹೊರತು.–

(ಎ) ಹಿಂಬರಹವನ್ನು ಸ್ವಯಿಚ್ಛೆಯಿಂದ ಮಾಡಲಾಗಿದೆ ಎಂದು;

(ಬಿ) ಹಿಂಬರಹವನ್ನು ಪೂರ್ಣ ಪ್ರತಿಫಲಕ್ಕಾಗಿ ಮಾಡಲಾಗಿದೆ ಎಂದು;

(ಸಿ) ಹಿಂಬರಹ ಮಾಡಿದವನಿಗೆ, ರಸೀದಿಯಲ್ಲಿ ತೋರಿಸಿರುವ ಸರಕುಗಳ ಮೇಲೆ ಸಂಪೂರ್ಣ ಕಾನೂನುಸಮ್ಮತ ಸ್ವಾಮ್ಯವನ್ನು ಹೊಂದಿದ್ದ ಎಂದು;

(ಡಿ) ಸರಕುಗಳ ಮೇಲೆ ಹಿಂಬರಹ ಮಾಡಿದವನಿಗೆ ಇರುವ ಎಲ್ಲಾ ಹಕ್ಕುಗಳ ಸ್ವಾಮ್ಯ ಮತ್ತು ಹಿತಾಸಕ್ತಿಯು ಹಿಂಬರಹದಿಂದ ಕೊನೆಗೊಳ್ಳುತ್ತದೆ ಎಂದು

– ಭಾವಿಸತಕ್ಕದ್ದು.

23. **ದ್ವಿಪ್ರತಿಯಲ್ಲಿ ರಸೀದಿ ನೀಡಿಕೆ.**– (1) ಯಾರೇ ಉಗ್ರಾಣ ಪಾಲಕನು, ರಸೀದಿಯಲ್ಲಿ ನಮೂದಿಸಿರಬಹುದಾದಂಥಹ ಪ್ರಮಾಣದ, ಗುಣಮಟ್ಟದ ಅಥವಾ ದರ್ಜೆಯ ಮತ್ತು ಇತರ ವಿವರಗಳಿರುವ ಸರಕುಗಳನ್ನು ನಿಜವಾಗಿ ಸ್ವೀಕರಿಸದಿದ್ದರೆ ಉಗ್ರಾಣ ರಸೀದಿಯನ್ನು ನೀಡತಕ್ಕದ್ದಲ್ಲ.

(2) ಯಾರೇ ವ್ಯಕ್ತಿಯು ದಾಸ್ತಾನು ಇಟ್ಟುಕೊಳ್ಳಲು ನೀಡಿರುವ ಅಂಥವೇ ಸರಕುಗಳಿಗೆ ಒಂದಕ್ಕಿಂತ ಹೆಚ್ಚು ರಸೀದಿಯನ್ನು ಉಗ್ರಾಣ ಪಾಲಕನು ನೀಡತಕ್ಕದ್ದಲ್ಲ:

ಪರಂತು, ನಷ್ಟ ಅಥವಾ ನಾಶದ ಸಂದರ್ಭದಲ್ಲಿ ಪ್ರಾಧಿಕಾರವು ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ರಸೀದಿಯ ನಕಲನ್ನು ನೀಡಬಹುದು.

(3) ಉಗ್ರಾಣ ಪಾಲಕನು, (2)ನೇ ಉಪ–ಪ್ರಕರಣದ ಉಪಬಂಧಗಳನ್ನು ಪಾಲಿಸಲು ತಪ್ಪಿದರೆ, ಅವನು, ಮೂಲ ರಸೀದಿಯ ಧಾರಕನಿಗೆ ಸರಕುಗಳನ್ನು ಒಪ್ಪಿಸಿಕೊಟ್ಟ ತರುವಾಯವೂ, ಯಾವ ವ್ಯಕ್ತಿಯು ಆ ರಸೀದಿಯನ್ನು ಮೂಲ ರಸೀದಿ ಎಂದು ನಂಬಿ ಅಂಥ ರಸೀದಿಗೆ ಅನುಸಾರವಾಗಿ ವ್ಯವಹಾರ ಮಾಡಿರುವನೋ ಆ ವ್ಯಕ್ತಿಗೆ, ಅಂಥ ವಿಫಲತೆಯಿಂದಾಗಿ ಉಂಟಾದ ಎಲ್ಲಾ ನಷ್ಟಗಳಿಗಾಗಿ ಉಗ್ರಾಣ ಪಾಲಕನೇ ಹೊಣೆಗಾರನಾಗುತ್ತಾನೆ.

(4) ಯಾವ ರಸೀದಿಯ ಮೇಲ್ಭಾಗದಲ್ಲಿ ದ್ವಿಪ್ರತಿ ಪದವನ್ನು ಸ್ಪಷ್ಟವಾಗಿ ಬರೆಯಲಾಗಿದೆಯೋ ಆ ರಸೀದಿಯು, ಆ ರಸೀದಿಯು ಸರಿಯಾಗಿ ನೀಡಿದಂಥ ರಸೀದಿಯ ಯಥಾ ಪ್ರತಿಯೊಂದು ಮತ್ತು ಉಗ್ರಾಣ ರಸೀದಿಯ ನಕಲನ್ನು ನೀಡಿದ ದಿನಾಂಕದಂದು ರದ್ದು ಮಾಡಿರದಂಥ ಪ್ರತಿ ಎಂದು ಉಗ್ರಾಣ ಪಾಲಕನು ನಿರೂಪಿಸಿರುವಂಥ ಮತ್ತು ಭರವಸೆ ಕೊಟ್ಟಿರುವಂಥ ರಸೀದಿ, ಆಗಿರುತ್ತದೆ.

## ಅಧ್ಯಾಯ – V

## ಉಗ್ರಾಣ ಸೌಲಭ್ಯ ಅಭಿವೃದ್ಧಿ ಮತ್ತು ವಿನಿಯಾಮಕ ಪ್ರಾಧಿಕಾರ

24. **ಪ್ರಾಧಿಕಾರದ ಸ್ಥಾಪನೆ ಮತ್ತು ನಿಗಮನ.**– (1) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ, ಉಗ್ರಾಣ ಸೌಲಭ್ಯ ಅಭಿವೃದ್ಧಿ ಮತ್ತು ವಿನಿಯಾಮಕ ಪ್ರಾಧಿಕಾರ ಎಂದು ಕರೆಯಬಹುದಾದ ಪ್ರಾಧಿಕಾರವನ್ನು ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅದಕ್ಕೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು ಮತ್ತು ಅದಕ್ಕೆ ವಹಿಸಿದ ಪ್ರಕಾರ್ಯಗಳನ್ನು ನೆರವೇರಿಸಲು ರಚಿಸತಕ್ಕದ್ದು.

(2) ಪ್ರಾಧಿಕಾರವು, ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನು ಆರ್ಜಿಸಲು, ಹೊಂದಲು ಮತ್ತು ವಿಲೇ ಮಾಡಲು ಮತ್ತು ಕರಾರು ಮಾಡಿಕೊಳ್ಳಲು ಶಾಶ್ವತ ಉತ್ತರಾಧಿಕಾರವುಳ್ಳ ಮತ್ತು ಅಧಿಕಾರದ ಸಹಿತ ಸಾಮಾನ್ಯ ಮೊಹರನ್ನು ಹೊಂದಿರುವ, ಮೇಲೆ ಹೇಳಿರುವ ಹೆಸರಿನ ನಿಗಮಿತ ನಿಕಾಯವಾಗಿರತಕ್ಕದ್ದು, ಮತ್ತು ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಅಥವಾ ದಾವೆಗೆ ಗುರಿಯಾಗತಕ್ಕದ್ದು.

(3) ಪ್ರಾಧಿಕಾರದ ಪ್ರಧಾನ ಕಛೇರಿಯು ನವದೆಹಲಿಯಲ್ಲಿರತಕ್ಕದ್ದು ಮತ್ತು ಪ್ರಾಧಿಕಾರವು, ಕೇಂದ್ರ ಸರ್ಕಾರದ ಪೂರ್ವಾನುಮೋದನೆಯೊಂದಿಗೆ, ಭಾರತದ ಇತರೇ ಸ್ಥಳಗಳಲ್ಲಿ ಕಚೇರಿಗಳನ್ನು ಸ್ಥಾಪಿಸಬಹುದು.

25. **ಪ್ರಾಧಿಕಾರದ ರಚನೆ.**– ಪ್ರಾಧಿಕಾರವು, ಸರಕು ದಾಸ್ತಾನು ನಿರ್ವಹಣೆ, ವಿಮೆ, ಸಂರಕ್ಷಣೆ, ಗುಣಮಟ್ಟ ನಿಯಂತ್ರಣ, ಕೃಷಿ, ಬ್ಯಾಂಕಿಂಗ್, ಹಣಕಾಸು, ಅರ್ಥಶಾಸ್ತ್ರ, ಕಾನೂನು ಅಥವಾ ಆಡಳಿತ ಕ್ಷೇತ್ರಗಳಲ್ಲಿ ವ್ಯಾಪಕ ಜ್ಞಾನವುಳ್ಳ ಮತ್ತು ಅನುಭವ ಹೊಂದಿರುವ ಸಮರ್ಥರಾದ ಮತ್ತು ನೀತಿ ನಿಷ್ಠೆಯುಳ್ಳ ಮತ್ತು ಪ್ರಖ್ಯಾತರಾದ ವ್ಯಕ್ತಿಗಳ ಪೈಕಿ ಕೇಂದ್ರ ಸರ್ಕಾರವು ನೇಮಿಸಬಹುದಾದ,–

(ಎ) ಒಬ್ಬ ಅಧ್ಯಕ್ಷನನ್ನು; ಮತ್ತು

(ಬಿ) ಇಬ್ಬರಿಗಿಂತ ಹೆಚ್ಚಿಗೆ ಇರದ ಇತರ ಸದಸ್ಯರನ್ನು

– ಒಳಗೊಂಡಿರತಕ್ಕದ್ದು.

26. **ಅಧ್ಯಕ್ಷನ ಮತ್ತು ಇತರ ಸದಸ್ಯರ ಪದಾವಧಿ.**– (1) ಅಧ್ಯಕ್ಷನು ಮತ್ತು ಇತರೆ ಪ್ರತಿಯೊಬ್ಬ ಸದಸ್ಯನು, ಯಾವ ದಿನಾಂಕದಿಂದ ತನ್ನ ಪದವನ್ನು ವಹಿಸಿಕೊಂಡನೋ ಆ ದಿನಾಂಕದಿಂದ ಐದು ವರ್ಷಗಳಿಗೆ ಮೀರದ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು ಮತ್ತು ಮರು ನೇಮಕಕ್ಕೆ ಅರ್ಹನಾಗಿರತಕ್ಕದ್ದು:

ಪರಂತು, ಯಾರೇ ವ್ಯಕ್ತಿಯು ಅವನಿಗೆ ಅರವತ್ತೈದು ವರ್ಷಗಳ ವಯಸ್ಸು ತುಂಬಿದ ತರುವಾಯ ಅಧ್ಯಕ್ಷನಾಗಿ ಅಥವಾ ಇತರೇ ಸದಸ್ಯನಾಗಿ ಪದಧಾರಣ ಮಾಡತಕ್ಕದ್ದಲ್ಲ.

(2) ಉಪ–ಪ್ರಕರಣ (1) ರಲ್ಲಿ ಏನೇ ಒಳಗೊಂಡಿದ್ದರೂ, ಸದಸ್ಯನು,–

(ಎ) ಕೇಂದ್ರ ಸರ್ಕಾರಕ್ಕೆ ಮೂರು ತಿಂಗಳಿಗೆ ಕಡಿಮೆ ಇಲ್ಲದ ಲಿಖಿತ ನೋಟೀಸನ್ನು ನೀಡುವ ಮೂಲಕ ತನ್ನ ಪದವನ್ನು ತ್ಯಜಿಸಬಹುದು; ಅಥವಾ

(ಬಿ) 27ನೇ ಪ್ರಕರಣದ ಉಪಬಂಧಗಳಿಗನುಸಾರವಾಗಿ ಆತನನ್ನು ಅವನ ಪದದಿಂದ ತೆಗೆದುಹಾಕಬಹುದು.

27. **ಪದದಿಂದ ತೆಗೆದುಹಾಕುವುದು.**– (1) ಕೇಂದ್ರ ಸರ್ಕಾರವು, ಯಾರೇ ಸದಸ್ಯನನ್ನು, ಅವನು

(ಎ) ದಿವಾಳಿ ಎಂದು ನ್ಯಾಯ ನಿರ್ಣೀತನಾಗಿದ್ದರೆ ಅಥವಾ ಯಾವುದೇ ಕಾಲದಲ್ಲಿ ಹಾಗೆಂದು ನ್ಯಾಯ ನಿರ್ಣೀತನಾಗಿದ್ದರೆ; ಅಥವಾ

(ಬಿ) ಸದಸ್ಯನಾಗಿ ಕಾರ್ಯ ನಿರ್ವಹಿಸಲು ದೈಹಿಕವಾಗಿ ಅಥವಾ ಮಾನಸಿಕವಾಗಿ ಅಸಮರ್ಥನಾಗಿರುವ; ಅಥವಾ

(ಸಿ) ಯಾವ ಅಪರಾಧವು ನೈತಿಕ ಅಧಃಪತನವನ್ನೊಳಗೊಂಡ ಅಪರಾಧವೆಂದು ಕೇಂದ್ರ ಸರ್ಕಾರವು ಅಭಿಪ್ರಾಯಪಡುವುದೋ ಆ ಅಪರಾಧದ ಅಪರಾಧಿಯೆಂದು ನಿರ್ಣೀತನಾದರೆ; ಅಥವಾ

(ಡಿ) ಸದಸ್ಯನಾಗಿ ಅವನ ಪ್ರಕಾರ್ಯಗಳಿಗೆ ಪ್ರತಿಕೂಲ ಪರಿಣಾಮವನ್ನುಂಟು ಮಾಡುವ ಸಂಭವ ಇರುವ ಹಣಕಾಸಿನ ಅಥವಾ ಇತರ ಹಿತಾಸಕ್ತಿಯನ್ನು ಹೊಂದಿದ್ದರೆ ಅಥವಾ;

(ಇ) ಅವನು ತನ್ನ ಸ್ಥಾನವನ್ನು ಎಷ್ಟರಮಟ್ಟಿಗೆ ದುರುಪಯೋಗ ಪಡಿಸಿಕೊಂಡಿದ್ದಾನೆಂದರೆ ಅವನನ್ನು ಪದದಲ್ಲಿ ಮುಂದುವರಿಸುವುದು ಸಾರ್ವಜನಿಕ ಹಿತಾಸಕ್ತಿಗೆ ಹಾನಿ ಉಂಟಾಗುವಷ್ಟರ ಮಟ್ಟಿಗೆ ತನ್ನ ಸ್ಥಾನವನ್ನು ದುರುಪಯೋಗಿಸಿಕೊಂಡಿದ್ದರೆ

– ಅವನನ್ನು ಪದದಿಂದ ತೆಗೆದುಹಾಕಬಹುದು.

(2) ಅಂಥ ಯಾರೇ ಸದಸ್ಯನು, ಈ ವಿಷಯದಲ್ಲಿ, ಅವನಿಗೆ ಅಹವಾಲು ಹೇಳಿಕೊಳ್ಳಲು ಸಮಂಜಸ ಅವಕಾಶವನ್ನು ಕೊಟ್ಟ ಹೊರತು, (1)ನೇ ಉಪ-ಪ್ರಕರಣದ (ಡಿ) ಖಂಡದ ಅಥವಾ (ಇ) ಖಂಡದ ಮೇರೆಗೆ ತೆಗೆದುಹಾಕತಕ್ಕದ್ದಲ್ಲ.

**28. ಅಧ್ಯಕ್ಷರ ಮತ್ತು ಇತರ ಸದಸ್ಯರ ಸಂಬಳ, ಭತ್ಯೆಗಳು ಮತ್ತು ನಿಬಂಧನೆಗಳು ಮತ್ತು ಷರತ್ತುಗಳು.–** ಇದಕ್ಕೆ ಸಂಬಂಧಿಸಿದಂತೆ ರಚಿಸಬಹುದಾದ ನಿಯಮಗಳಿಗೆ ಒಳಪಟ್ಟು,-

(ಎ) ಅಧ್ಯಕ್ಷರಿಗೆ ಸಂದಾಯ ಮಾಡಬೇಕಾದ ಸಂಬಳ ಮತ್ತು ಭತ್ಯೆಗಳು ಮತ್ತು ಸೇವೆಯ ಇತರ ನಿಬಂಧನೆಗಳು ಮತ್ತು ಷರತ್ತುಗಳು ಭಾರತ ಸರ್ಕಾರದ ಕಾರ್ಯದರ್ಶಿ ಹುದ್ದೆಗೆ ಇರುವಂಥವುಗಳೇ ಆಗಿರತಕ್ಕದ್ದು.

(ಬಿ) ಪ್ರಾಧಿಕಾರದ ಇತರ ಸದಸ್ಯರುಗಳಿಗೆ ಸಂದಾಯ ಮಾಡಬೇಕಾದ ಸಂಬಳ ಮತ್ತು ಭತ್ಯೆಗಳು ಮತ್ತು ಸೇವೆಯ ಇತರ ನಿಬಂಧನೆಗಳು ಮತ್ತು ಷರತ್ತುಗಳು ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿಗಳಿಗೆ ಇರುವಂಥವುಗಳೇ ಆಗಿರತಕ್ಕದ್ದು.

**29. ಇನ್ನು ಮುಂದೆ ಸದಸ್ಯರುಗಳು ಉದ್ಯೋಗಕ್ಕೆ ನೇಮಕಗೊಳ್ಳುವುದಕ್ಕೆ ನಿಷೇಧ.–** ಅಧ್ಯಕ್ಷರು ಮತ್ತು ಇತರೆ ಸದಸ್ಯರುಗಳೂ ಅವರು ತಮ್ಮ ತಮ್ಮ ಪದಧಾರಣ ಮಾಡಿರುವುದು ಯಾವ ದಿನಾಂಕದಂದು ನಿಂತು ಹೋಗುವುದೋ ಆ ದಿನಾಂಕದಿಂದ ಎರಡು ವರ್ಷಗಳ ಅವಧಿಯವರೆಗೆ ಉಗ್ರಾಣ ಸೌಲಭ್ಯ ವಲಯದಲ್ಲಿರುವ ಯಾವುದೇ ಸಂಸ್ಥೆಯಲ್ಲಿ ಕೇಂದ್ರ ಸರ್ಕಾರದ ಪೂರ್ವಾನುಮೋದನೆಯ ಹೊರತು ಯಾವುದೇ ಉದ್ಯೋಗವನ್ನು ಒಪ್ಪಿಕೊಳ್ಳತಕ್ಕದ್ದಲ್ಲ.

**30. ಅಧ್ಯಕ್ಷರು ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕರಾಗಿರುವುದು.–** ಅಧ್ಯಕ್ಷರು, ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕರಾಗಿರತಕ್ಕದ್ದು.

**31. ಪ್ರಾಧಿಕಾರದ ಸಭೆಗಳು.– (1)** ಪ್ರಾಧಿಕಾರವು, ವಿನಿಯಮಗಳ ಮೂಲಕ ನಿರ್ಧರಿಸಬಹುದಾದಂಥ ಸಮಯಗಳಲ್ಲಿ ಮತ್ತು ಸ್ಥಳಗಳಲ್ಲಿ ಸಭೆ ಸೇರತಕ್ಕದ್ದು ಮತ್ತು ಅದರ ಸಭೆಗಳಲ್ಲಿ (ಅಂಥ ಸಭೆಗಳಲ್ಲಿ ಕೋರಂ ಸೇರಿದಂತೆ) ಕಾರ್ಯಕಲಾಪಗಳ ನಿರ್ವಹಣೆಯ ಸಂಬಂಧದಲ್ಲಿ ಅಂಥ ನಿಯಮಗಳನ್ನು ಮತ್ತು ಪ್ರಕ್ರಿಯೆಗಳನ್ನು ಪಾಲಿಸತಕ್ಕದ್ದು.

(2) ಅಧ್ಯಕ್ಷನು, ಅವನು ಯಾವುದೇ ಕಾರಣದಿಂದ ಪ್ರಾಧಿಕಾರದ ಸಭೆಗೆ ಹಾಜರಾಗಲು ಸಾಧ್ಯವಾಗದಿದ್ದರೆ, ಸಭೆಯಲ್ಲಿ ಹಾಜರಿರುವ ಸದಸ್ಯರು ತಮ್ಮೊಳಗಿಂದ ಆಯ್ಕೆ ಮಾಡಿದ ಯಾರೇ ಇತರ ಸದಸ್ಯನು ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು.-

(3) ಪ್ರಾಧಿಕಾರದ ಯಾವುದೇ ಸಭೆಯ ಮುಂದೆ ಬರುವ ಎಲ್ಲಾ ವಿಷಯಗಳನ್ನು, ಹಾಜರಿರುವ ಮತ್ತು ಮತ ಚಲಾಯಿಸುವ ಸದಸ್ಯರ ಬಹುಮತದ ಮೂಲಕ ತೀರ್ಮಾನಿಸತಕ್ಕದ್ದು ಮತ್ತು ಮತಗಳು ಸಮ ಸಮವಾಗಿದ್ದ ಸಂದರ್ಭದಲ್ಲಿ, ಅಧ್ಯಕ್ಷನು ಅಥವಾ ಅವನ ಅನುಪಸ್ಥಿತಿಯಲ್ಲಿ ಅಧ್ಯಕ್ಷತೆ ವಹಿಸಿದ ವ್ಯಕ್ತಿಯು ಎರಡನೇ ಅಥವಾ ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು.

**32. ಖಾಲಿಸ್ಥಾನಗಳು, ಮುಂತಾದವು ಪ್ರಾಧಿಕಾರದ ವ್ಯವಹರಣೆಗಳನ್ನು ಅಸಿಂಧುಗೊಳಿಸದಿರುವುದು.–** ಪ್ರಾಧಿಕಾರದ ಯಾವುದೇ ಕಾರ್ಯವು ಅಥವಾ ವ್ಯವಹರಣೆಯು,-

(ಎ) ಪ್ರಾಧಿಕಾರದಲ್ಲಿ ಯಾವುದೇ ಸ್ಥಾನ ಖಾಲಿ ಇರುವ ಅಥವಾ ಅದರ ರಚನೆಯಲ್ಲಿ ಯಾವುದೇ ನ್ಯೂನತೆ ಇರುವ; ಅಥವಾ

(ಬಿ) ಪ್ರಾಧಿಕಾರದ ಸದಸ್ಯನಾಗಿ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಯ ನೇಮಕದಲ್ಲಿ ಯಾವುದೇ ನ್ಯೂನತೆ ಇರುವ; ಅಥವಾ

(ಸಿ) ಪ್ರಾಧಿಕಾರದ ಪ್ರಕ್ರಿಯೆಯಲ್ಲಿ ಪ್ರಕರಣದ ಗುಣಾವಗುಣಗಳಿಗೆ ಬಾಧಕವಾಗದಂಥ ಯಾವುದೇ ಅಕ್ರಮತೆ ಇರುವ

– ಕಾರಣ ಮಾತ್ರದಿಂದಲೇ ಅಸಿಂಧುವಾಗತಕ್ಕದ್ದಲ್ಲ.

**33. ಪ್ರಾಧಿಕಾರದ ಅಧಿಕಾರಿಗಳು ಮತ್ತು ನೌಕರರು.–** (1) ಪ್ರಾಧಿಕಾರವು, ಈ ಅಧಿನಿಯಮದ ಮೇರೆಗೆ ಅದರ ಪ್ರಕಾರ್ಯಗಳನ್ನು ಸಮರ್ಥವಾಗಿ ನಿರ್ವಹಿಸಲು ಅದು ಅವಶ್ಯವೆಂದು ಪರಿಗಣಿಸಬಹುದಾದಷ್ಟು ಸಂಖ್ಯೆಯ ಅಧಿಕಾರಿಗಳನ್ನು ಮತ್ತು ಇತರೆ ನೌಕರರನ್ನು ನೇಮಕ ಮಾಡತಕ್ಕದ್ದು.

(2) ಉಪ–ಪ್ರಕರಣ (1) ರ ಮೇರೆಗೆ ನೇಮಕ ಮಾಡಿದ ಪ್ರಾಧಿಕಾರದ ಅಧಿಕಾರಿಗಳು ಮತ್ತು ಇತರ ನೌಕರರ ಸೇವಾ ನಿಬಂಧನೆಗಳು ಮತ್ತು ಇತರ ಷರತ್ತುಗಳು ಈ ಅಧಿನಿಯಮದ ಮೇರೆಗೆ ರಚಿಸಿದ ವಿನಿಯಮಗಳ ಮೂಲಕ ನಿಯಂತ್ರಿತವಾಗತಕ್ಕದ್ದು.

34. **ಉಗ್ರಾಣ ಸೌಲಭ್ಯ ಸಲಹಾ ಸಮಿತಿ.–** (1) ಪ್ರಾಧಿಕಾರವು, ಅಧಿಸೂಚನೆಯ ಮೂಲಕ, 51ನೇ ಪ್ರಕರಣದ ಮೇರೆಗೆ ವಿನಿಯಮಗಳನ್ನು ರಚಿಸುವುದಕ್ಕೆ ಸಂಬಂಧಪಟ್ಟ ವಿಷಯಗಳ ಮೇಲೆ ಪ್ರಾಧಿಕಾರಕ್ಕೆ ಸಲಹೆ ನೀಡಲು ಮತ್ತು ಈ ಅಧಿನಿಯಮದ ಉಪಬಂಧಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರುವ ಸಲುವಾಗಿ ಶಿಫಾರಸು ಮಾಡಲು ಉಗ್ರಾಣ ಸೌಲಭ್ಯ ಸಲಹಾ ಸಮಿತಿ ಎನ್ನುವ ಒಂದು ಸಮಿತಿಯನ್ನು ರಚಿಸಬಹುದು.

(2) ಉಗ್ರಾಣ ಸೌಲಭ್ಯ ಸಲಹಾ ಸಮಿತಿಯು, ಪ್ರಾಧಿಕಾರದ ಸದಸ್ಯರನ್ನು ಹೊರತುಪಡಿಸಿ ವಾಣಿಜ್ಯ, ಕೈಗಾರಿಕೆ, ಇಂಜಿನೀಯರಿಂಗ್, ಕೃಷಿ, ಬಳಕೆದಾರರ ಸಂರಕ್ಷಣೆ ಕ್ಷೇತ್ರಗಳು, ಉಗ್ರಾಣ ಸೌಲಭ್ಯ ವ್ಯವಹಾರಗಳಲ್ಲಿ, ಗುಣಮಟ್ಟ ನಿಯಂತ್ರಣದಲ್ಲಿ, ಸಂರಕ್ಷಣೆಯಲ್ಲಿ ತೊಡಗಿಸಿಕೊಂಡಿರುವ ಸಂಸ್ಥೆಗಳನ್ನು ಮತ್ತು ಸಂಶೋಧನಾ ನಿಕಾಯಗಳ ಹಿತಾಸಕ್ತಿಯನ್ನು ಪ್ರತಿನಿಧಿಸಲು ಹದಿನೈದಕ್ಕೆ ಹೆಚ್ಚಿಲ್ಲದಂತೆ ಸದಸ್ಯರನ್ನು ಒಳಗೊಂಡಿರತಕ್ಕದ್ದು.

(3) ಉಪ–ಪ್ರಕರಣ (1) ರ ಉಪಬಂಧಗಳಿಗೆ ಬಾಧಕವಾಗದಂತೆ, ಉಗ್ರಾಣ ಸೌಲಭ್ಯ ಸಲಹಾ ಸಮಿತಿಯು, ಪ್ರಾಧಿಕಾರವು ಅದಕ್ಕೆ ಉಲ್ಲೇಖಿಸಬಹುದಾದಂಥ ಇತರೆ ವಿಷಯಗಳ ಮೇಲೆ ಪ್ರಾಧಿಕಾರಕ್ಕೆ ಸಲಹೆ ನೀಡಬಹುದು.

## ಅಧ್ಯಾಯ – VI

## ಪ್ರಾಧಿಕಾರದ ಅಧಿಕಾರಗಳು ಮತ್ತು ಕರ್ತವ್ಯಗಳು

**35. ಪ್ರಾಧಿಕಾರದ ಅಧಿಕಾರಗಳು ಮತ್ತು ಕರ್ತವ್ಯಗಳು.–** (1) ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿಗೆ ಒಳಪಟ್ಟು, ಪ್ರಾಧಿಕಾರವು, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಮತ್ತು ಉಪಬಂಧಗಳು ಕಾರ್ಯಗತವಾಗಿರುವುದನ್ನು ಸುನಿಶ್ಚಿತ ಪಡಿಸಿಕೊಳ್ಳುವುದಕ್ಕಾಗಿ ವಿನಿಯಮಿಸುವ ಮತ್ತು ಉಗ್ರಾಣ ಸೌಲಭ್ಯ ವ್ಯವಹಾರದ ಕ್ರಮಬದ್ಧ ಬೆಳವಣಿಗೆಗೆ ಉತ್ತೇಜನ ನೀಡುವ ಕರ್ತವ್ಯವನ್ನು ಹೊಂದಿರತಕ್ಕದ್ದು.

(2) ಮೇಲೆ ಹೇಳಿರುವ ಉಪಬಂಧಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಪ್ರಾಧಿಕಾರದ ಅಧಿಕಾರಗಳು ಮತ್ತು ಪ್ರಕಾರ್ಯಗಳು ಈ ಮುಂದಿನವುಗಳನ್ನು ಒಳಗೊಂಡಿರತಕ್ಕದ್ದು:–

(ಎ) ಉಗ್ರಾಣ ಪಾಲಕನಿಗೆ ಇರಬೇಕಾದ ಅಗತ್ಯತೆಗಳನ್ನು ಈಡೇರಿಸುವ ಅರ್ಜಿದಾರರುಗಳಿಗೆ ಉಗ್ರಾಣಗಳಿಗೆ ಸಂಬಂಧಪಟ್ಟಂತೆ ನೋಂದಣಿ ಪ್ರಮಾಣಪತ್ರವನ್ನು ನೀಡುವುದು, ಅಥವಾ ಅಂಥ ನೋಂದಣಿಯನ್ನು ನವೀಕರಿಸುವುದು, ಮಾರ್ಪಾಟು ಮಾಡುವುದು, ಹಿಂತೆಗೆದುಕೊಳ್ಳುವುದು, ಅಮಾನತುಗೊಳಿಸುವುದು ಅಥವಾ ರದ್ದು ಮಾಡುವುದು;

(ಬಿ) ಮಾನ್ಯತೆ ನೀಡಿಕೆ ಏಜೆನ್ಸಿಯ ನೋಂದಣಿಯನ್ನು ಮತ್ತು ಪ್ರಕಾರ್ಯವನ್ನು ವಿನಿಯಮಿಸುವುದು ಅಂಥ ನೋಂದಣಿಯನ್ನು ನವೀಕರಿಸುವುದು, ಮಾರ್ಪಾಟು ಮಾಡುವುದು, ಅಂಥ ನೋಂದಣಿಯನ್ನು, ತಡೆಹಿಡಿಯುವುದು ಅಥವಾ ರದ್ದು ಮಾಡುವುದು ಮತ್ತು ಉಗ್ರಾಣಗಳಿಗೆ ಮಾನ್ಯತೆ ನೀಡುವುದಕ್ಕಾಗಿ ಇರುವ ಮಾನ್ಯತೆ ನೀಡಿಕೆ ಏಜೆನ್ಸಿಗಳ ಸಿಬ್ಬಂದಿಗಳಿಗೆ ನೀತಿ ಸಂಹಿತೆಯನ್ನು ನಿರ್ದಿಷ್ಟಪಡಿಸುವುದು;

(ಸಿ) ಉಗ್ರಾಣ ಪಾಲಕನಿಗೆ ಮತ್ತು ಉಗ್ರಾಣ ಸೌಲಭ್ಯ ವ್ಯವಹಾರಗಳಲ್ಲಿ ತೊಡಗಿರುವ ಸಿಬ್ಬಂದಿಗಳಿಗೆ ಅರ್ಹತೆಗಳನ್ನು ನೀತಿ ಸಂಹಿತೆಯನ್ನು ಮತ್ತು ಪ್ರಾಯೋಗಿಕ ತರಬೇತಿಯನ್ನು ನಿರ್ದಿಷ್ಟಪಡಿಸುವುದು;

(ಡಿ) ಉಗ್ರಾಣದಲ್ಲಿ ದಾಸ್ತಾನಿಡಲಾದ ಸರಕುಗಳ ಸಂಬಂಧದಲ್ಲಿ ಒತ್ತೆ ವಿಧಾನಕ್ಕೆ ಹೊಣೆಗಾರಿಕೆಗಳ ಸೃಜನೆಗೆ ಮತ್ತು ಹೊಣೆಗಾರಿಕೆ ಪಾಲನೆಗೆ ಪ್ರಕ್ರಿಯೆಯನ್ನು ವಿನಿಯಮಿಸುವುದು;

(ಇ) ಉಗ್ರಾಣ ವ್ಯವಹಾರಗಳ ನಿರ್ವಹಣೆಯಲ್ಲಿ ದಕ್ಷತೆಯನ್ನು ವೃದ್ಧಿಸುವುದು;

(ಎಫ್) ಸರಕುಗಳ ದರ್ಜೆ ನಿಗದಿ ಮಾಡಲು ಪ್ರಮಾಣೀಕರಣ ಏಜೆನ್ಸಿಗಳ ಅನುಮೋದನೆಗಾಗಿ ಗುಣಮಟ್ಟಗಳನ್ನು ಗೊತ್ತುಪಡಿಸಲು ವಿನಿಯಮಗಳನ್ನು ರಚಿಸುವುದು;

(ಜಿ) ಉಗ್ರಾಣ ಸೌಲಭ್ಯ ವ್ಯವಹಾರಗಳಿಗೆ ಸಂಬಂಧಿಸಿದಂತೆ ವೃತ್ತಿಪರ ಸಂಘಸಂಸ್ಥೆಗಳಿಗೆ ಉತ್ತೇಜನ ನೀಡುವುದು;

(ಎಚ್) ಈ ಅಧಿನಿಯಮದ ಉಪಬಂಧಗಳ ಅನುಷ್ಠಾನಕ್ಕಾಗಿ ಫೀಜುಗಳನ್ನು ಅಥವಾ ಇತರ ದರಗಳನ್ನು ನಿರ್ಧರಿಸುವುದು ಮತ್ತು ವಿಧಿಸುವುದು:

(ಐ) ಉಗ್ರಾಣ ಸೌಲಭ್ಯ ವ್ಯವಹಾರಗಳಿಗೆ ಸಂಬಂಧಿಸಿದ ಉಗ್ರಾಣಗಳ, ಮಾನ್ಯತೆ ನೀಡಿಕೆ ಏಜೆನ್ಸಿಗಳ ಮತ್ತು ಇತರೆ ಸಂಘಗಳ ಲೆಕ್ಕಪತ್ರ ಪರಿಶೋಧನೆಯೂ ಸೇರಿದಂತೆ, ಅವುಗಳಿಂದ ಮಾಹಿತಿ ತರಿಸಿಕೊಳ್ಳುವುದು, ಅವುಗಳ ತಪಾಸಣೆ ಮಾಡುವುದು, ವಿಚಾರಣೆಗಳನ್ನು ಮತ್ತು ತನಿಖೆಗಳನ್ನು ಕೈಗೊಳ್ಳುವುದು;

(ಜೆ) ಉಗ್ರಾಣ ಸೌಲಭ್ಯ ವ್ಯವಹಾರಗಳಿಗೆ ಸಂಬಂಧಿಸಿದಂತೆ ಉಗ್ರಾಣ ಪಾಲಕರುಗಳು ಕೊಡಬಹುದಾದ ದರಗಳನ್ನು, ಸೌಲಭ್ಯಗಳನ್ನು ಪ್ರಸ್ತಾಪಿಸಬಹುದಾದ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ವಿನಿಯಮಿಸುವುದು;

(ಕೆ) ಉಗ್ರಾಣ ಪಾಲಕನು ಲೆಕ್ಕ ಪುಸ್ತಕಗಳನ್ನು ಯಾವ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಇಡಬೇಕೋ ಮತ್ತು ಲೆಕ್ಕಗಳ ವಿವರಪಟ್ಟಿಯನ್ನು ಯಾವ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಸಲ್ಲಿಸಬೇಕೋ ಆ ನಮೂನೆ ಮತ್ತು ರೀತಿಯನ್ನು ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸುವುದು;

(ಎಲ್) ಮಧ್ಯಸ್ಥಗಾರರ ಪಟ್ಟಿಯನ್ನು ಇಡುವುದು ಮತ್ತು ಉಗ್ರಾಣಗಳ ಮತ್ತು ಉಗ್ರಾಣ ರಸೀದಿ ಧಾರಕರ ನಡುವಿನ ವಿವಾದಗಳಲ್ಲಿ ಅಂಥ ಪಟ್ಟಿಯಿಂದ ಮಧ್ಯಸ್ಥಗಾರರನ್ನು ನಾಮ ನಿರ್ದೇಶನ ಮಾಡುವುದು;

(ಎಂ) ಉಗ್ರಾಣಗಳಲ್ಲಿ ದಾಸ್ತಾನಿದ್ದ ತತ್ಸದೃಶ ಸರಕುಗಳ ಜಮಾ ಶಿಲ್ಕುಗಳನ್ನು ಇಟ್ಟುಕೊಳ್ಳುವದಕ್ಕಾಗಿ ಮತ್ತು ವರ್ಗಾವಣೆ ಮಾಡುವುದಕ್ಕಾಗಿ ವಿನಿಯಮಿಸುವುದು ಮತ್ತು ವಿದ್ಯುನ್ಮಾನ ಪದ್ಧತಿಯನ್ನು ಅಭಿವೃದ್ಧಿಪಡಿಸುವುದು;

(ಎನ್) ನೋಂದಾಯಿತ ಉಗ್ರಾಣದಲ್ಲಿ ಇರುವ ಸ್ಥಳವಕಾಶದಲ್ಲಿ ಕೃಷಿ ಸರಕು ಸಾಮಗ್ರಿಗಳ ದಾಸ್ತಾನಿಗಾಗಿ ಮೀಸಲಿಡಬೇಕಾದ ಕನಿಷ್ಠ ಪ್ರಮಾಣವನ್ನು ನಿರ್ಧರಿಸುವುದು;

(ಓ) ಉಗ್ರಾಣ ಪಾಲಕನ ಕರ್ತವ್ಯಗಳನ್ನು ಮತ್ತು ಹೊಣೆಗಾರಿಕೆಗಳನ್ನು ನಿರ್ದಿಷ್ಟಪಡಿಸುವುದು;

(ಪಿ) ನಿಯಮಿಸಬಹುದಾದಂಥ ಇತರೆ ಅಧಿಕಾರಗಳನ್ನು ಚಲಾಯಿಸುವುದು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸುವುದು.

## ಅಧ್ಯಾಯ – VII

### ಹಣಕಾಸು, ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ

**36. ಕೇಂದ್ರ ಸರ್ಕಾರದ ಅನುದಾನಗಳು.–** ಕೇಂದ್ರ ಸರ್ಕಾರವು, ಈ ಬಗ್ಗೆ ಕಾನೂನಿನ ಮೂಲಕ ಸಂಸತ್ತು ಮಾಡಿದ ಯುಕ್ತ ವಿನಿಯೋಗದ ತರುವಾಯ, ಈ ಅಧಿನಿಯಮದ ಉದ್ದೇಶಗಳಿಗಾಗಿ ಉಪಯೋಗಿಸಿಕೊಳ್ಳಲು ಸೂಕ್ತವೆಂದು ಭಾವಿಸಬಹುದಾದಂಥ ಹಣದ ಅನುದಾನಗಳನ್ನು ಸರ್ಕಾರವು ಪ್ರಾಧಿಕಾರಕ್ಕೆ ನೀಡಬಹುದು.

**37. ನಿಧಿ ರಚನೆ.–** (1) ಉಗ್ರಾಣ ಸೌಲಭ್ಯ ಅಭಿವೃದ್ಧಿ ಮತ್ತು ವಿನಿಯಾಮಕ ಪ್ರಾಧಿಕಾರ ನಿಧಿ ಎಂದು ಕರೆಯಲಾಗುವ ಒಂದು ನಿಧಿಯನ್ನು ಸ್ಥಾಪಿಸತಕ್ಕದ್ದು ಮತ್ತು ಅದಕ್ಕೆ,–

(ಎ) ಪ್ರಾಧಿಕಾರವು ಕೇಂದ್ರ ಸರ್ಕಾರದಿಂದ ಸ್ವೀಕರಿಸಿದ ಎಲ್ಲಾ ಅನುದಾನಗಳನ್ನು, ಶುಲ್ಕಗಳನ್ನು ಮತ್ತು ಚಾರ್ಜುಗಳನ್ನು;

(ಬಿ) ಕೇಂದ್ರ ಸರ್ಕಾರವು ತೀರ್ಮಾನಿಸಬಹುದಾದಂಥ ಇತರ ಸಂಪನ್ಮೂಲಗಳಿಂದ ಪ್ರಾಧಿಕಾರವು ಸ್ವೀಕರಿಸಿದ ಎಲ್ಲಾ ಮೊತ್ತಗಳನ್ನು;

(ಸಿ) ಈ ಅಧಿನಿಯಮದ ಮೇರೆಗಿನ ದಂಡಗಳ ರೂಪದಲ್ಲಿ ಪ್ರಾಪ್ತವಾದ ಎಲ್ಲಾ ಮೊತ್ತಗಳನ್ನು

– ಜಮೆ ಮಾಡತಕ್ಕದ್ದು

(2) ನಿಧಿಯನ್ನು,–

(ಎ) ಪ್ರಾಧಿಕಾರದ ಸದಸ್ಯರ, ಅಧಿಕಾರಿಗಳ ಮತ್ತು ಇತರ ನೌಕರರ ಸಂಬಳವನ್ನು, ಭತ್ಯೆಗಳನ್ನು ಮತ್ತು ಇತರ ಸಂಭಾವನೆಯನ್ನು ನೀಡಲು;

(ಬಿ) ಪ್ರಾಧಿಕಾರವು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವ ಸಂಬಂಧದಲ್ಲಿ ಮತ್ತು ಈ ಅಧಿನಿಯಮದ ಉದ್ದೇಶಗಳಿಗಾಗಿ ಇತರ ವೆಚ್ಚಗಳನ್ನು ಭರಿಸಲು

– ವಿನಿಯೋಗಿಸತಕ್ಕದ್ದು.

**38. ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ.–** (1) ಕೇಂದ್ರ ಸರ್ಕಾರವು, ಭಾರತದ ಲೆಕ್ಕ ನಿಯಂತ್ರಕ–ಹಾಗೂ–ಮಹಾಲೆಕ್ಕಪರಿಶೋಧಕನೊಂದಿಗೆ ಸಮಾಲೋಚಿಸಿ, ನಿಯಮಿಸಬಹುದಾದಂಥ ನಮೂನೆಯಲ್ಲಿ ಪ್ರಾಧಿಕಾರವು ಲೆಕ್ಕಪತ್ರಗಳನ್ನು ಮತ್ತು ಸಂಬಂಧಪಟ್ಟ ಇತರ ದಾಖಲೆಗಳನ್ನು ಇಡತಕ್ಕದ್ದು ಮತ್ತು ಲೆಕ್ಕಪತ್ರಗಳ ವಾರ್ಷಿಕ ವಿವರಪತ್ರವನ್ನು ಸಿದ್ಧಪಡಿಸತಕ್ಕದ್ದು;

(2) ಪ್ರಾಧಿಕಾರದ ಲೆಕ್ಕಪತ್ರಗಳನ್ನು, ಭಾರತದ ಲೆಕ್ಕ ನಿಯಂತ್ರಕ–ಹಾಗೂ–ಮಹಾ–ಲೆಕ್ಕಪರಿಶೋಧಕನು ತಾನು ನಿರ್ದಿಷ್ಟಪಡಿಸಬಹುದಾದಂಥ ಮಧ್ಯಂತರಗಳಲ್ಲಿ ಲೆಕ್ಕ ಪರಿಶೋಧನೆ ಮಾಡತಕ್ಕದ್ದು ಮತ್ತು ಅಂಥ ಲೆಕ್ಕಪರಿಶೋಧನೆಯ ಸಂಬಂಧದಲ್ಲಿ ಮಾಡಿದ ಯಾವುದೇ ವೆಚ್ಚವನ್ನು ಪ್ರಾಧಿಕಾರವು ಲೆಕ್ಕ ನಿಯಂತ್ರಕ–ಹಾಗೂ–ಮಹಾ ಲೆಕ್ಕಪರಿಶೋಧಕನಿಗೆ ಸಂದಾಯ ಮಾಡತಕ್ಕದ್ದು;

(3) ಭಾರತದ ಲೆಕ್ಕ ನಿಯಂತ್ರಕರು–ಹಾಗೂ–ಮಹಾಲೆಕ್ಕಪರಿಶೋಧಕನು ಪ್ರಾಧಿಕಾರದ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯ ಸಂಬಂಧದಲ್ಲಿ ಮತ್ತು ಯಾರೇ ಇತರ ವ್ಯಕ್ತಿಯು, ಲೆಕ್ಕ ನಿಯಂತ್ರಕ–ಹಾಗೂ–ಮಹಾ ಲೆಕ್ಕ ಪರಿಶೋಧಕನು ಸರ್ಕಾರಿ ಲೆಕ್ಕ ಪರಿಶೋಧನೆಯ ಸಂಬಂಧದಲ್ಲಿ ಸಾಮಾನ್ಯವಾಗಿ ಹೊಂದಿರುವಂಥವೇ ಹಕ್ಕುಗಳನ್ನು ವಿಶೇಷಾಧಿಕಾರಿಗಳನ್ನು ಮತ್ತು ಅಧಿಕಾರಗಳನ್ನು ಅಂಥ ಲೆಕ್ಕ ಪರಿಶೋಧನೆಗೆ ಸಂಬಂಧಪಟ್ಟಂತೆಯೂ ಹೊಂದಿರತಕ್ಕದ್ದು ಮತ್ತು ಅದರಲ್ಲೂ ಮುಖ್ಯವಾಗಿ ಲೆಕ್ಕ ಪುಸ್ತಕಗಳನ್ನು, ಸಂಬಂಧಿಸಿದ ವೋಚರುಗಳನ್ನು ಮತ್ತು ಇತರ ದಸ್ತಾವೇಜುಗಳನ್ನು ಮತ್ತು ಕಾಗದ ಪತ್ರಗಳನ್ನು ಹಾಜರುಪಡಿಸುವಂತೆ ಒತ್ತಾಯಿಸುವ ಮತ್ತು ಪ್ರಾಧಿಕಾರದ ಯಾವುದೇ ಕಚೇರಿಯನ್ನು ಪರಿಶೀಲಿಸುವ ಹಕ್ಕನ್ನು ಹೊಂದಿರತಕ್ಕದ್ದು.

(4) ಭಾರತದ ಲೆಕ್ಕ ನಿಯಂತ್ರಕ–ಹಾಗೂ–ಮಹಾಲೆಕ್ಕಪರಿಶೋಧಕನು ಅಥವಾ ಈ ಬಗ್ಗೆ ಅವನು ನೇಮಕ ಮಾಡಿದ ಯಾರೇ ಇತರ ವ್ಯಕ್ತಿಯು ಪ್ರಮಾಣೀಕರಿಸಿದ ಪ್ರಾಧಿಕಾರದ ಲೆಕ್ಕ ಪತ್ರಗಳನ್ನು ಅದರ ಮೇಲಿನ ಲೆಕ್ಕ ಪರಿಶೋಧನಾ ವರದಿಯೊಂದಿಗೆ ಕೇಂದ್ರ ಸರ್ಕಾರಕ್ಕೆ ಪ್ರತಿ ವರ್ಷವೂ ಕಳುಹಿಸತಕ್ಕದ್ದು ಮತ್ತು ಆ ಸರ್ಕಾರವು ಅದನ್ನು ಸಂಸತ್ತಿನ ಉಭಯ ಸದನಗಳ ಮುಂದೆ ಇಡಿಸತಕ್ಕದ್ದು.

**39. ಕೇಂದ್ರ ಸರ್ಕಾರಕ್ಕೆ ವಿವರಪಟ್ಟಿಕೆ, ಮುಂತಾದವುಗಳನ್ನು ಒದಗಿಸುವುದು.–** (1) ಉಗ್ರಾಣ ಸೌಲಭ್ಯ ಉದ್ಯಮದ ಬೆಳವಣಿಗೆ ಮತ್ತು ಪ್ರಗತಿಗಾಗಿ ಯಾವುದೇ ಪ್ರಸ್ತಾಪಿತ ಅಥವಾ ಪ್ರಸ್ತುತ ಕಾರ್ಯಕ್ರಮದ ಬಗ್ಗೆ ಒದಗಿಸಬೇಕೆಂದು ಕೇಂದ್ರ ಸರ್ಕಾರವು

ನಿರ್ದೇಶಿಸಬಹುದಾದಂಥ ವಿವರ ಪಟ್ಟಿಕೆಗಳನ್ನು, ವಿವರಪತ್ರಗಳನ್ನು ಮತ್ತು ಇತರ ವಿವರಗಳನ್ನು ಕೇಂದ್ರ ಸರ್ಕಾರವು, ನಿಯಮಿಸಬಹುದಾದಂಥ ಕಾಲದಲ್ಲಿ, ನಮೂನೆಯಲ್ಲಿ ಮತ್ತು ರೀತಿಯಲ್ಲಿ ಕೇಂದ್ರ ಸರ್ಕಾರಕ್ಕೆ ಒದಗಿಸತಕ್ಕದ್ದು.

(2) ಉಪ-ಪ್ರಕರಣ (1)ರ ಉಪಬಂಧಗಳಿಗೆ ಬಾಧಕವಾಗದ ರೀತಿಯಲ್ಲಿ, ಪ್ರಾಧಿಕಾರವು, ಪ್ರತಿಯೊಂದು ಹಣಕಾಸು ವರ್ಷವು ಪೂರ್ಣಗೊಂಡ ನಂತರ, ಒಂಬತ್ತು ತಿಂಗಳೊಳಗಾಗಿ, ಹಿಂದಿನ ಹಣಕಾಸು ವರ್ಷದಲ್ಲಿ ಉಗ್ರಾಣ ಸೌಲಭ್ಯ ವ್ಯವಹಾರದ ಬೆಳವಣಿಗೆ ಮತ್ತು ಪ್ರಗತಿಯ ಕಾರ್ಯ ಚಟುವಟಿಕೆಗಳೂ ಸೇರಿದಂತೆ ಅದರ ಕಾರ್ಯ ಚಟುವಟಿಕೆಗಳ ನಿಜವಾದ ಮತ್ತು ಪೂರ್ಣವಾದ ವಿವರಣೆಯನ್ನು ನೀಡುವ ಒಂದು ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

(3) ಉಪ-ಪ್ರಕರಣ (2) ಮೇರೆಗೆ, ವರದಿಯ ಪ್ರತಿಗಳನ್ನು ಸ್ವೀಕರಿಸಿದ ನಂತರ ಆದಷ್ಟು ಬೇಗನೆ ಸಂಸತ್ತಿನ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು.

## ಅಧ್ಯಾಯ- VIII

## ಕೇಂದ್ರ ಸರ್ಕಾರದ ಅಧಿಕಾರಗಳು

**40. ನಿರ್ದೇಶನಗಳನ್ನು ನೀಡಲು ಕೇಂದ್ರ ಸರ್ಕಾರದ ಅಧಿಕಾರ.**- (1) ಈ ಅಧಿನಿಯಮದಲ್ಲಿ ಹಿಂದೆ ಹೇಳಿದ ಉಪಬಂಧಗಳಿಗೆ ಬಾಧಕವಾಗದಂತೆ, ಪ್ರಾಧಿಕಾರವು ಈ ಅಧಿನಿಯಮದ ಮೇರೆಗೆ ಅದರ ಅಧಿಕಾರಗಳನ್ನು ಚಲಾಯಿಸುವಾಗ ಅಥವಾ ಅದರ ಪ್ರಕಾರ್ಯಗಳನ್ನು ನೇರವೇರಿಸುವಾಗ, ಕೇಂದ್ರ ಸರ್ಕಾರವು ಕಾಲಕಾಲಕ್ಕೆ ಅದಕ್ಕೆ ಲಿಖಿತದಲ್ಲಿ ನೀಡಬಹುದಾದಂಥ ತಾಂತ್ರಿಕ ಮತ್ತು ಆಡಳಿತಾತ್ಮಕ ವಿಷಯಗಳ ಸಂಬಂಧದಲ್ಲಿ ಹೊರತು, ಕಾರ್ಯ ನೀತಿಯ ಪ್ರಶ್ನೆಗಳ ಮೇಲಿನ ನಿರ್ದೇಶನಗಳಿಗೆ ಬದ್ಧವಾಗಿರತಕ್ಕದ್ದು:

ಪರಂತು, ಈ ಉಪ-ಪ್ರಕರಣದ ಮೇರೆಗೆ ಯಾವುದೇ ನಿರ್ದೇಶನಗಳನ್ನು ನೀಡುವುದಕ್ಕೆ ಮುಂಚೆ ಪ್ರಾಧಿಕಾರಕ್ಕೆ ಕಾರ್ಯಸಾಧ್ಯವಾಗುವಷ್ಟರ ಮಟ್ಟಿಗೆ ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಒಂದು ಅವಕಾಶವನ್ನು ನೀಡತಕ್ಕದ್ದು.

(2) ವಿಷಯವು ನೀತಿಗೆ ಸಂಬಂಧಿಸಿರಲಿ ಅಥವಾ ಇಲ್ಲದಿರಲಿ ಕೇಂದ್ರ ಸರ್ಕಾರದ ತೀರ್ಮಾನವೇ ಅಂತಿಮವಾದುದಾಗಿರತಕ್ಕದ್ದು.

**41. ಪ್ರಾಧಿಕಾರವನ್ನು ರದ್ದುಗೊಳಿಸಲು ಕೇಂದ್ರ ಸರ್ಕಾರದ ಅಧಿಕಾರ.**- (1) ಕೇಂದ್ರ ಸರ್ಕಾರವು ಯಾವುದೇ ಕಾಲದಲ್ಲಿ,-

(ಎ) ಪ್ರಾಧಿಕಾರದ ನಿಯಂತ್ರಣಕ್ಕೂ ಮೀರಿದ ಸನ್ನಿವೇಶಗಳು ಇದ್ದ ಕಾರಣದಿಂದಾಗಿ, ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಮೇರೆಗೆ ಅದಕ್ಕೆ ವಿಧಿಸಿದ ಪ್ರಕಾರ್ಯಗಳನ್ನು ನಿರ್ವಹಿಸಲು ಅಥವಾ ಕರ್ತವ್ಯಗಳನ್ನು ನೇರವೇರಿಸಲು ಅಸಮರ್ಥವಾಗಿದೆ ಎಂದು; ಅಥವಾ

(ಬಿ) ಪ್ರಾಧಿಕಾರವು ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ನೀಡಿದ ಯಾವುದೇ ನಿರ್ದೇಶನವನ್ನು ಪಾಲಿಸಲು ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಮೇರೆಗೆ ವಿಧಿಸಿದ ಪ್ರಕಾರ್ಯಗಳನ್ನು ನಿರ್ವಹಿಸಲು ಅಥವಾ ಕರ್ತವ್ಯಗಳನ್ನು ನೇರವೇರಿಸಲು ಸತತವಾಗಿ ತಪ್ಪು ಮಾಡಿದೆ ಎಂದು ಮತ್ತು ಹಾಗೆ ತಪ್ಪು ಮಾಡಿದ ಪರಿಣಾಮವಾಗಿ ಪ್ರಾಧಿಕಾರದ ಹಣಕಾಸು ಪರಿಸ್ಥಿತಿಗೆ ಅಥವಾ ಆಡಳಿತಕ್ಕೆ ಧಕ್ಕೆಯುಂಟಾಗಿದೆ ಎಂದು; ಅಥವಾ

(ಸಿ) ಯಾವ ಸನ್ನಿವೇಶಗಳಿಂದಾಗಿ ಸಾರ್ವಜನಿಕ ಹಿತದೃಷ್ಟಿಯಿಂದ ಪ್ರಾಧಿಕಾರವನ್ನು ರದ್ದುಗೊಳಿಸುವುದು ಅವಶ್ಯವೆನಿಸಿದೆಯೋ ಆ ಸನ್ನಿವೇಶಗಳಿವೆ ಎಂದು ಅಭಿಪ್ರಾಯಪಟ್ಟಲ್ಲಿ ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ ಮತ್ತು ಅದರಲ್ಲಿ ಕಾರಣಗಳನ್ನು ನಿರ್ದಿಷ್ಟಪಡಿಸಿ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಆರು ತಿಂಗಳು ಮೀರದ ಅವಧಿಯವರೆಗೆ ಪ್ರಾಧಿಕಾರವನ್ನು ರದ್ದುಗೊಳಿಸಬಹುದು ಮತ್ತು ಒಬ್ಬ ವ್ಯಕ್ತಿಯನ್ನು ನಾಮನಿರ್ದೇಶನ ಮಾಡತಕ್ಕದ್ದು;

ಪರಂತು, ಅಂಥ ಯಾವುದೇ ಅಧಿಸೂಚನೆಯನ್ನು ಹೊರಡಿಸುವುದಕ್ಕೂ ಮುಂಚೆ ಕೇಂದ್ರ ಸರ್ಕಾರವು, ಪ್ರಾಧಿಕಾರಕ್ಕೆ ಪ್ರಸ್ತಾವಿತ ರದ್ದಿಯಾತಿಯ ವಿರುದ್ಧ ಮನವಿಗಳನ್ನು ಸಲ್ಲಿಸಲು ಯುಕ್ತ ಅವಕಾಶವನ್ನು ನೀಡತಕ್ಕದ್ದು ಮತ್ತು ಪ್ರಾಧಿಕಾರದ ಮನವಿಗಳು ಏನಾದರೂ ಇದ್ದರೆ, ಅವುಗಳನ್ನು ಪರಿಶೀಲಿಸತಕ್ಕದ್ದು.

(2) ಉಪ-ಪ್ರಕರಣ (1) ರ ಮೇರೆಗೆ ಪ್ರಾಧಿಕಾರವನ್ನು ರದ್ದುಗೊಳಿಸುವ ಅಧಿಸೂಚನೆಯನ್ನು ಪ್ರಕಟಿಸಿದ ನಂತರ,-

(ಎ) ಅಧ್ಯಕ್ಷರು ಮತ್ತು ಇತರ ಸದಸ್ಯರು, ರದ್ದಿಯಾತಿಯ ದಿನಾಂಕದಿಂದ ತಮ್ಮ ಆ ಪದಗಳನ್ನು ತೆರವು ಮಾಡಿದ್ದಾರೆಂದು ಭಾವಿಸತಕ್ಕದ್ದು;

(ಬಿ) ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಮೇರೆಗೆ ಪ್ರಾಧಿಕಾರದ ಅಥವಾ ಅದರ ಪರವಾಗಿ ಚಲಾಯಿಸಬಹುದಾದ ಅಥವಾ ನಿರ್ವಹಿಸಬಹುದಾದ ಎಲ್ಲಾ ಅಧಿಕಾರಗಳನ್ನು, ಪ್ರಕಾರ್ಯಗಳನ್ನು ಮತ್ತು ಕರ್ತವ್ಯಗಳನ್ನು (3)ನೇ ಉಪ-ಪ್ರಕರಣದ ಮೇರೆಗೆ ಪ್ರಾಧಿಕಾರವು ಪುನರ್ ರಚನೆಯಾಗುವವರೆಗೆ, (1)ನೇ ಉಪ-ಪ್ರಕರಣದ (ಸಿ) ಖಂಡದ ಮೇರೆಗೆ ಕೇಂದ್ರ ಸರ್ಕಾರದಿಂದ ನಾಮನಿರ್ದೇಶಿತನಾದ ವ್ಯಕ್ತಿಯು ಚಲಾಯಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು; ಮತ್ತು

(ಸಿ) (3)ನೇ ಉಪ-ಪ್ರಕರಣದ ಮೇರೆಗೆ ಪ್ರಾಧಿಕಾರವು ಪುನರ್ ರಚನೆಯಾಗುವವರೆಗೆ ಪ್ರಾಧಿಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಎಲ್ಲಾ ಸ್ವತ್ತುಗಳು ಕೇಂದ್ರ ಸರ್ಕಾರದಲ್ಲಿ ನಿಹಿತವಾಗಿರತಕ್ಕದ್ದು.

(3) ಉಪ-ಪ್ರಕರಣ (1) ರ ಮೇರೆಗೆ ಹೊರಡಿಸಿದ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ರದ್ದಿಯಾತಿಯ ಅವಧಿಯು ಮುಕ್ತಾಯವಾಗುವ ದಿನದಂದು ಅಥವಾ ಅದಕ್ಕೂ ಮುಂಚೆ ಕೇಂದ್ರ ಸರ್ಕಾರವು, ಹೊಸದಾಗಿ ಅಧ್ಯಕ್ಷನನ್ನು ಮತ್ತು ಇತರ ಸದಸ್ಯರನ್ನು

ನೇಮಕ ಮಾಡುವುದರ ಮೂಲಕ ಪ್ರಾಧಿಕಾರವನ್ನು ಪುನರ್‌ರಚಿಸತಕ್ಕದ್ದು ಮತ್ತು ಅಂಥ ಸಂದರ್ಭದಲ್ಲಿ (2)ನೇ ಉಪ-ಪ್ರಕರಣದ (ಎ) ಖಂಡದ ಮೇರೆಗೆ ತನ್ನ ಪದವನ್ನು ತೆರವು ಮಾಡಿದ ಯಾರೇ ವ್ಯಕ್ತಿಯನ್ನು ಪುನರ್ ನೇಮಕ ಮಾಡಲು ಅನರ್ಹನೆಂಬುದಾಗಿ ಭಾವಿಸತಕ್ಕದ್ದಲ್ಲ.

(4) ಕೇಂದ್ರ ಸರ್ಕಾರವು, (1)ನೇ ಉಪ-ಪ್ರಕರಣದ ಮೇರೆಗೆ ಹೊರಡಿಸಿದ ಅಧಿಸೂಚನೆಯ ಒಂದು ಪ್ರತಿಯನ್ನು ಮತ್ತು ಈ ಪ್ರಕರಣದ ಮೇರೆಗೆ ತೆಗೆದುಕೊಳ್ಳಲಾದ ಯಾವುದೇ ಕ್ರಮದ ಮತ್ತು ಕ್ರಮವನ್ನು ತೆಗೆದುಕೊಳ್ಳಲು ಕಾರಣವಾದ ಸನ್ನಿವೇಶಗಳ ಪೂರ್ಣ ವರದಿಯನ್ನು ಆದಷ್ಟು ಬೇಗನೆ ಸಂಸತ್ತಿನ ಉಭಯ ಸದನಗಳ ಮುಂದೆ ಇಡಿಸತಕ್ಕದ್ದು.

(5) ಯಾವುದೇ ಕಾನೂನಿನಲ್ಲಿ ಅಥವಾ ಯಾವುದೇ ಕರಾರಿನಲ್ಲಿ ಅಥವಾ ಸಂಘಸ್ಥಾಪನಾ ಜ್ಞಾಪನಪತ್ರದಲ್ಲಿ ಅಥವಾ ಸಂಘದ ಅಂತರನಿಯಮಾವಳಿಗಳಲ್ಲಿ ಏನೇ ಒಳಗೊಂಡಿದ್ದರೂ, ಈ ಪ್ರಕರಣದ ಮೇರೆಗೆ ಪದದಿಂದ ವ್ಯಕ್ತಿಯನ್ನು ತೆಗೆದು ಹಾಕಿದ ಮೇಲೆ ಆ ವ್ಯಕ್ತಿಯು ತನ್ನ ಪದವನ್ನು ಕಳೆದುಕೊಂಡಿದ್ದ ಅಥವಾ ಪದವು ಅಂತ್ಯಗೊಂಡಿದ್ದಕ್ಕೆ ಯಾವುದೇ ಪರಿಹಾರವನ್ನು ಕ್ಲೇಮು ಮಾಡಲು ಅರ್ಹನಾಗಿರತಕ್ಕದ್ದಲ್ಲ.

## ಅಧ್ಯಾಯ- IX

## ಅಪೀಲುಗಳು

42. **ಅಪೀಲು ಪ್ರಾಧಿಕಾರಕ್ಕೆ ಅಪೀಲುಗಳು.–** (1) ಈ ಅಧಿನಿಯಮದ ಮೇರೆಗೆ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮಗಳ ಅಥವಾ ವಿನಿಯಮಗಳ ಮೇರೆಗೆ ಪ್ರಾಧಿಕಾರವು ಮಾಡಿದ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು ಕೇಂದ್ರ ಸರ್ಕಾರವು ನೇಮಕ ಮಾಡಿದ ಅಂಥ ವ್ಯಕ್ತಿಗೆ ಅಥವಾ ಪ್ರಾಧಿಕಾರಕ್ಕೆ (ಇಲ್ಲಿ ಇನ್ನು ಮುಂದೆ ಅಪೀಲು ಪ್ರಾಧಿಕಾರವೆಂದು ಉಲ್ಲೇಖಿಸಲಾಗಿದೆ) ಅಂಥ ಆದೇಶದ ದಿನಾಂಕದಿಂದ ಅರವತ್ತು ದಿನಗಳೊಳಗೆ ಅಪೀಲನ್ನು ಸಲ್ಲಿಸಬಹುದು:

ಪರಂತು, ಅಪೀಲುದಾರನು, ಸದರಿ ಅವಧಿಯೊಳಗೆ ಅಪೀಲನ್ನು ಸಲ್ಲಿಸದಿರುವುದಕ್ಕೆ ಸಾಕಷ್ಟು ಕಾರಣವಿತ್ತೆಂದು ಅಪೀಲು ಪ್ರಾಧಿಕಾರಕ್ಕೆ ಮನವರಿಕೆ ಮಾಡಿಕೊಟ್ಟರೆ ಸದರಿ ಅರವತ್ತು ದಿವಸಗಳ ಅವಧಿಯ ಮುಕ್ತಾಯವಾದ ತರುವಾಯವೂ ಆದರೆ ಒಟ್ಟು ತೊಂಬತ್ತು ದಿವಸಗಳ ಅವಧಿಯನ್ನು ಮೀರಿರದಿದ್ದರೆ ಅಪೀಲನ್ನು ಅಂಗೀಕರಿಸಬಹುದು.

(2) ಈ ಪ್ರಕರಣದ ಮೇರೆಗೆ ಪ್ರತಿಯೊಂದು ಅಪೀಲನ್ನು ನಿಯಮಿಸಬಹುದಾದಂತಹ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಸಲ್ಲಿಸಿರತಕ್ಕದ್ದು ಮತ್ತು ಅದರ ಜೊತೆಗೆ ಯಾವ ಆದೇಶದ ವಿರುದ್ಧ ಅಪೀಲನ್ನು ಸಲ್ಲಿಸಲಾಗಿದೆಯೋ ಆ ಆದೇಶದ ಪ್ರತಿ ಮತ್ತು ನಿಯಮಿಸಬಹುದಾದಂತಹ ಫೀಜು ಇರತಕ್ಕದ್ದು.

(3) ಅಪೀಲಿನ ವಿಲೆ ಪ್ರಕ್ರಿಯೆಯು ನಿಯಮಿಸಬಹುದಾದಂತೆ ಇರತಕ್ಕದ್ದು:

ಪರಂತು, ಅಪೀಲನ್ನು ವಿಲೆ ಮಾಡುವುದಕ್ಕೂ ಮುಂಚೆ ಅಪೀಲುದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಡತಕ್ಕದ್ದು.

(4) ಅಪೀಲು ಪ್ರಾಧಿಕಾರದ ಮುಂದೆ ಸಲ್ಲಿಸಿದ ಅಪೀಲನ್ನು ಸಾಧ್ಯವಾದಷ್ಟು ತ್ವರಿತವಾಗಿ ವಿಚಾರಣೆ ಮಾಡತಕ್ಕದ್ದು ಮತ್ತು ವಿಲೇ ಮಾಡತಕ್ಕದ್ದು ಮತ್ತು ಅದನ್ನು ಸಲ್ಲಿಸಿದ ದಿನಾಂಕದಿಂದ ತೊಂಬತ್ತು ದಿನಗಳ ಅವಧಿಯೊಳಗೆ ಅಪೀಲನ್ನು ಅಂತಿಮವಾಗಿ ವಿಲೇ ಮಾಡಲು ಪ್ರಯತ್ನ ಮಾಡತಕ್ಕದ್ದು.

## ಅಧ್ಯಾಯ – X

## ಅಪರಾಧಗಳು ಮತ್ತು ದಂಡನೆಗಳು

43. **ಅಪರಾಧಗಳು ಮತ್ತು ದಂಡನೆಗಳು.–** (1) ಯಾರೇ ಉಗ್ರಾಣ ಪಾಲಕನು ತನ್ನ ಉಗ್ರಾಣದಲ್ಲಿರುವ ಸರಕುಗಳನ್ನು ವಾಸ್ತವಿಕವಾಗಿ ಸ್ವತಃ ವಶಕ್ಕೆ ತೆಗೆದುಕೊಳ್ಳದಿರುವುದು ಗೊತ್ತಿದ್ದರೂ ವರ್ಗಾವಣೀಯ ಉಗ್ರಾಣ ರಸೀದಿಯನ್ನು ನೀಡಿದ್ದರೆ ಅಥವಾ ಯಾವ ಸರಕುಗಳಿಗೆ ಅಂಥ ಉಗ್ರಾಣ ರಸೀದಿಯನ್ನು ನೀಡಲಾಗಿದೆಯೋ ಆ ಸರಕುಗಳನ್ನು ವಾಸ್ತವಿಕವಾಗಿ ಸ್ವೀಕರಿಸಲಾಗಿರುವುದನ್ನು ಅಥವಾ ಆ ಸರಕುಗಳ ಸಂಖ್ಯೆಯು, ತೂಕವು ಅಥವಾ ದರ್ಜೆಯು ಉಗ್ರಾಣ ರಸೀದಿಯಲ್ಲಿ ನಿರ್ದಿಷ್ಟಪಡಿಸಿದ ಸಂಖ್ಯೆಗೆ, ತೂಕಕ್ಕೆ ಅಥವಾ ದರ್ಜೆಗೆ ಹೋಲಿಕೆಯಾಗಿರುವುದನ್ನು ಅಥವಾ ಸರಕುಗಳು ಅಂಥ ಉಗ್ರಾಣ ರಸೀದಿಯನ್ನು ನೀಡುವ ಸಮಯದಲ್ಲಿ ತನ್ನ ವಾಸ್ತವಿಕ ನಿಯಂತ್ರಣದಲ್ಲಿದ್ದವೆಂಬುದನ್ನು ಯುಕ್ತವಾಗಿ ಸ್ವತಃ ಮನದಟ್ಟು ಮಾಡಿಕೊಳ್ಳದೆ ಉಗ್ರಾಣ ಪಾಲಕನು ಅಥವಾ ಏಜೆಂಟನು ಅಥವಾ ಅವನ ಸೇವಕನು ಉಗ್ರಾಣ ರಸೀದಿಯನ್ನು ನೀಡಿದ್ದರೆ ಅವನು ಅಪರಾಧ ಮಾಡಿದಂತಾಗುತ್ತದೆ ಮತ್ತು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಸರಕುಗಳ ಮೌಲ್ಯದ ನಾಲ್ಕುಪಟ್ಟಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(2) ಉಗ್ರಾಣ ಪಾಲಕನು ಅಥವಾ ಉಗ್ರಾಣ ಪಾಲಕನ ಏಜೆಂಟ್‌ನು ಅಥವಾ ಸೇವಕನು ಉಗ್ರಾಣ ರಸೀದಿಯ ದ್ವಿಪ್ರತಿಯನ್ನು ನೀಡುವುದಕ್ಕೆ ಇರುವ ಕಾರ್ಯವಿಧಾನವನ್ನು ವಾಸ್ತವಿಕವಾಗಿ ಅನುಸರಿಸದಿರುವುದು ಗೊತ್ತಿದ್ದೂ ಅಂಥ ರಸೀದಿಯ ದ್ವಿಪ್ರತಿಯನ್ನು ನೀಡಿದರೆ ಅಪರಾಧ ಮಾಡಿದಂತಾಗುತ್ತದೆ ಮತ್ತು ಅಂಥ ಅಪರಾಧಕ್ಕಾಗಿ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(3) ಉಗ್ರಾಣ ಪಾಲಕನು ಅಥವಾ ಉಗ್ರಾಣ ಪಾಲಕನ ಏಜೆಂಟ್‌ನು ಅಥವಾ ಸೇವಕನು ಅಂಥ ಸರಕುಗಳ ಸಂಬಂಧದಲ್ಲಿ ವರ್ಗಾವಣೀಯ ಉಗ್ರಾಣ ರಸೀದಿಯು ಇನ್ನು ಬಂದಿಲ್ಲ ಎಂಬುದು ಮತ್ತು ಅದನ್ನು ರದ್ದುಗೊಳಿಸಿಲ್ಲ ಎಂಬುದು ಗೊತ್ತಿದ್ದೂ, ವಶಕ್ಕೆ

ಒಪ್ಪಿಸುವ ಕಾಲದಲ್ಲಿ ಅಥವಾ ಮುಂಚೆ ಅಂಥ ವರ್ಗಾವಣೀಯ ಉಗ್ರಾಣ ರಸೀದಿಯನ್ನು ಸಾಧೀನಕ್ಕೆ ಪಡೆಯದೇ ಸರಕುಗಳನ್ನು ವಶಕ್ಕೆ ಒಪ್ಪಿಸಿದರೆ ಮತ್ತು ಆ ಮೂಲಕ ಯಾರೇ ವ್ಯಕ್ತಿಗೆ ಕಾನೂನುಬಾಹಿರ ನಷ್ಟ ಅಥವಾ ಲಾಭ ಉಂಟು ಮಾಡಿದರೆ ಅಪರಾಧ ಮಾಡಿದಂತೆ ಆಗುತ್ತದೆ ಮತ್ತು ಅಂಥ ಅಪರಾಧಕ್ಕಾಗಿ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ, ಕಾರಾವಾಸದಿಂದ ಅಥವಾ ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(4) ಉಗ್ರಾಣ ಪಾಲಕನು, ಸರಕನ್ನು ಒಪ್ಪಿಸುವ ವ್ಯಕ್ತಿಯು ಅಥವಾ ಹಿಂಬರಹ ಪಡೆದವನು ವರ್ಗಾವಣೀಯ ಹಿಂಬರಹ ರಸೀದಿಯನ್ನು ಒಪ್ಪಿಸಿದ ಮೇಲೆ ಮತ್ತು ಅವನ ಎಲ್ಲ ಕಾನೂನುಬದ್ಧ ಶುಲ್ಕಗಳನ್ನು ಸಂದಾಯ ಮಾಡಿದ ಮೇಲೆ ಮತ್ತು ರಸೀದಿಯ ಮೇಲೆ ಹಿಂಬರಹ ಮಾಡಿದ ಋಣಭಾರಗಳನ್ನು ರದ್ದುಗೊಳಿಸಿದ ಮೇಲೆ ಅದರಲ್ಲಿ ನಮೂದಿಸಿದಂತೆ ಸರಕುಗಳ ಘೋಷಿತ ತಾಳಿಕೆ ಅವಧಿಯೊಳಗೆ ರಸೀದಿಯಲ್ಲಿ ತೋರಿಸಿದ ಸರಕುಗಳನ್ನು ವಶಕ್ಕೆ ನೀಡಲು ತಪ್ಪಿದರೆ ಅಪರಾಧ ಮಾಡಿದಂತಾಗುತ್ತದೆ ಮತ್ತು ಅಂಥ ಅಪರಾಧಕ್ಕಾಗಿ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಸರಕುಗಳ ಮೌಲ್ಯದ ಮೂರುಪಟ್ಟು ಮೌಲ್ಯಕ್ಕೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವರೆಡರಿಂದಲೂ ದಂಡಿತನಾಗತಕ್ಕದ್ದು.

(5) ಸರಕನ್ನು ಒಪ್ಪಿಸುವ ಯಾರೇ ವ್ಯಕ್ತಿಯು ಉಗ್ರಾಣ ಪಾಲಕನ ಬಳಿ ದಾಸ್ತಾನು ಇಡುವುದಕ್ಕೆ ನೀಡಿದ ಸರಕುಗಳ ಯಾವ ಮೌಲ್ಯದ ಹಣವು ಸರಿಯಾದ ಮೌಲ್ಯದ ಹಣ ಎಂದು ತಾನೇ ನಂಬುವುದಿಲ್ಲವೋ ಆ ಹಣದ ಅಂಥ ಮೌಲ್ಯವನ್ನು ಸರಕನ್ನು ಒಪ್ಪಿಸುವ ಆ ಯಾರೇ ವ್ಯಕ್ತಿಯು ಘೋಷಿಸಿದರೆ ಅಪರಾಧ ಮಾಡಿದಂತಾಗುತ್ತದೆ ಮತ್ತು ಅಂಥ ಅಪರಾಧಕ್ಕಾಗಿ ಅವನು ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

44. **ಕಂಪನಿಗಳಿಂದ ಅಪರಾಧಗಳು.**– (1) ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಒಂದು ಕಂಪನಿಯು ಮಾಡಿದ್ದರೆ, ಆ ಅಪರಾಧವು ನಡೆದ ಕಾಲದಲ್ಲಿ, ಆ ಕಂಪನಿಯ ವ್ಯವಹಾರಗಳನ್ನು ನಡೆಸುವುದಕ್ಕೆ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಆ ಕಂಪನಿಯನ್ನು ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತನ್ನ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಹಾಗೂ ತದನುಸಾರವಾಗಿ ದಂಡಿತನಾಗತಕ್ಕದ್ದು.

ಪರಂತು, ಅಂಥ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧ ನಡೆಯುವುದನ್ನು ತಡೆಗಟ್ಟಲು ತಾನು ಎಲ್ಲಾ ಯಥೋಚಿತ ಜಾಗರೂಕತೆ ವಹಿಸಿದ್ದನೆಂದು ಅಂಥ ಯಾರೇ ವ್ಯಕ್ತಿಯು ರುಜುವಾತುಪಡಿಸಿದರೆ, ಈ ಉಪ-ಪ್ರಕರಣದಲ್ಲಿರುವುದು ಯಾವುದೂ ಅವನನ್ನು ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) ಉಪ-ಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಒಂದು ಕಂಪನಿಯು ಮಾಡಿದ್ದರೆ, ಮತ್ತು ಆ ಅಪರಾಧವು ಕಂಪನಿಯ ಯಾರೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆದಿದೆಯೆಂದು ಅಥವಾ ಅವನ ಯಾವುದೇ ನಿರ್ಲಕ್ಷ್ಯತೆಯ ಕಾರಣದಿಂದ ನಡೆದಿದೆಯೆಂದು ಆರೋಪಿಸಿರುವುದು ರುಜುವಾತಾದರೆ, ಅಂಥ ಯಾರೇ ನಿರ್ದೇಶಕನನ್ನು, ವ್ಯವಸ್ಥಾಪಕನನ್ನು, ಕಾರ್ಯದರ್ಶಿಯನ್ನು ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತನ್ನ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತನಾಗತಕ್ಕದ್ದು.

**ವಿವರಣೆ:** ಈ ಪ್ರಕರಣದ ಉದ್ದೇಶಗಳಿಗಾಗಿ,-

(ಎ) "ಕಂಪನಿ" ಎಂದರೆ, ಯಾವುದೇ ನಿಗಮಿತ ನಿಕಾಯ ಎಂದು ಅರ್ಥ ಮತ್ತು ಅದು ಒಂದು ಫರ್ಮ್‌ನ್ನು ಮತ್ತು ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಒಂದು ಫರ್ಮಿನ ಸಂಬಂಧದಲ್ಲಿ "ನಿರ್ದೇಶಕ" ಎಂದರೆ, ಆ ಫರ್ಮಿನ ಪಾಲುಗಾರ.

45. **ನ್ಯಾಯಾಲಯಗಳಿಂದ ಅಪರಾಧಗಳ ಸಂಜ್ಞಾನ.**– (1) ಯಾವುದೇ ನ್ಯಾಯಾಲಯವು ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು, ಪ್ರಾಧಿಕಾರವು ಈ ಬಗ್ಗೆ ಅಧಿಕಾರ ನೀಡಿರುವ ಯಾರೇ ಅಧಿಕಾರಿಯು ಸಲ್ಲಿಸಿದ ಫಿರ್ಯಾದಿನ ಮೇಲೆ ಹೊರತು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

(2) ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್‌ರ ಅಥವಾ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ಫಸ್ಟ್‌ಕ್ಲಾಸ್‌ರವರ ನ್ಯಾಯಾಲಯದ ದರ್ಜೆಗಿಂತ ಕೆಳ ದರ್ಜೆಯ ಯಾವುದೇ ನ್ಯಾಯಾಲಯವು ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು ಅಧಿವಿಚಾರಣೆ ಮಾಡತಕ್ಕದ್ದಲ್ಲ.

## ಅಧ್ಯಾಯ – XI

### ಸಂಕೀರ್ಣ

46. **ಪ್ರಾಧಿಕಾರದ ಅಧ್ಯಕ್ಷ, ಸದಸ್ಯರು, ಅಧಿಕಾರಿಗಳು ಮತ್ತು ಇತರ ನೌಕರರು ಲೋಕ ನೌಕರರಾಗಿರುವುದು.**– ಪ್ರಾಧಿಕಾರದ ಅಧ್ಯಕ್ಷ, ಸದಸ್ಯರು, ಅಧಿಕಾರಿಗಳು ಮತ್ತು ಇತರ ನೌಕರರು ಈ ಅಧಿನಿಯಮದ ಯಾವುದೇ ಉಪಬಂಧಗಳಿಗೆ ಅನುಸಾರವಾಗಿ ಕಾರ್ಯನಿರ್ವಹಿಸುತ್ತಿರುವಾಗ ಅಥವಾ ನಿರ್ವಹಿಸುತ್ತಿರುವುದಾಗಿ ತಾತ್ಪರ್ಯವಾದಾಗ ಅವರನ್ನು ಭಾರತ ದಂಡ ಸಂಹಿತೆಯ (1980ಕ್ಕೆ 45) 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕ ನೌಕರರೆಂದು ಭಾವಿಸತಕ್ಕದ್ದು.

47. **ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.**– ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಅಥವಾ ವಿನಿಮಯಗಳ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದ ಬಗ್ಗೆ ಕೇಂದ್ರ ಸರ್ಕಾರದ ಅಥವಾ ಕೇಂದ್ರ ಸರ್ಕಾರದ ಯಾರೇ ಅಧಿಕಾರಿಯ ಅಥವಾ ಪ್ರಾಧಿಕಾರದ ಯಾರೇ ಸದಸ್ಯನ, ಅಧಿಕಾರಿಯ

ಅಥವಾ ಇತರ ನೌಕರನ ವಿರುದ್ಧ ಯಾವುದೇ ದಾವೆಯನ್ನು, ಪ್ರಾಸಿಕ್ಯೂಷನನ್ನು ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ:

ಪರಂತು, ಈ ಅಧಿನಿಯಮದಲ್ಲಿರುವುದು ಯಾವುದೂ, ಈ ಅಧಿನಿಯಮದ ಮೇರೆಗಲ್ಲದೆ, ಬೇರೆ ರೀತಿಯಿಂದ ಅವನ ವಿರುದ್ಧ ಹೂಡಬಹುದಾದಂಥ ಯಾವುದೇ ದಾವೆಗೆ ಅಥವಾ ಇತರ ವ್ಯವಹರಣೆಗಳಿಗೆ ಸಂಬಂಧಿಸಿದಂತೆ ಯಾರೇ ವ್ಯಕ್ತಿಗೆ ವಿನಾಯಿತಿ ಕೊಡುವುದಿಲ್ಲ.

48. **ಅಧಿಕಾರಗಳ ಪ್ರತ್ಯಾಯೋಜನೆ.–** ಪ್ರಾಧಿಕಾರವು, ಲಿಖಿತದಲ್ಲಿ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳೇನಾದರೂ ಇದ್ದರೆ, ಅವುಗಳಿಗೆ ಒಳಪಟ್ಟು, ಪ್ರಾಧಿಕಾರದ ಅಧ್ಯಕ್ಷ ಅಥವಾ ಯಾರೇ ಇತರ ಸದಸ್ಯನಿಗೆ ಅಥವಾ ಅಧಿಕಾರಿಗೆ ಈ ಅಧಿನಿಯಮದ ಮೇರೆಗೆ (51ನೇ ಪ್ರಕರಣದ ಮೇರೆಗೆ ವಿನಿಯಮಗಳನ್ನು ರಚಿಸಿರುವ ಅಧಿಕಾರದ ಹೊರತು) ಅದು ಅಗತ್ಯವೆಂದು ಭಾವಿಸಬಹುದಾದಂಥ ಅದರ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಪ್ರತ್ಯಾಯೋಜಿಸಬಹುದು.

49. **ಸಂಪತ್ತು ಮತ್ತು ಆದಾಯದ ಮೇಲಿನ ತೆರಿಗೆಗೆ ವಿನಾಯಿತಿ.–** ಸಂಪತ್ತಿನ ಮೇಲಿನ ವರಮಾನದ ಮೇಲಿನ ಲಾಭಗಳ ಅಥವಾ ಗಳಿಕೆಗಳ ಮೇಲಿನ ತೆರಿಗೆಗೆ ಸಂಬಂಧಪಟ್ಟಂತೆ ಸಂಪತ್ತು ತೆರಿಗೆ ಅಧಿನಿಯಮ, 1957ರಲ್ಲಿ (1957ರ 27) ವರಮಾನ ತೆರಿಗೆ ಅಧಿನಿಯಮ, 1961ರಲ್ಲಿ (1961ರ 43) ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಪ್ರಾಧಿಕಾರವು ತಾನು ಗಳಿಸಿದ ಸಂಪತ್ತಿಗೆ, ವರಮಾನಕ್ಕೆ, ಲಾಭಗಳಿಗೆ ಅಥವಾ ಗಳಿಕೆಗಳಿಗೆ ಸಂಬಂಧಿಸಿದಂತೆ ಸಂಪತ್ತು ತೆರಿಗೆಯನ್ನು, ವರಮಾನದ ತೆರಿಗೆಯನ್ನು ಅಥವಾ ಯಾವುದೇ ಇತರ ತೆರಿಗೆಯನ್ನು ಸಂದಾಯ ಮಾಡಲು ಬದ್ಧವಾಗಿರತಕ್ಕದ್ದಲ್ಲ.

50. **ನಿಯಮಗಳನ್ನು ರಚಿಸಲು ಕೇಂದ್ರ ಸರ್ಕಾರದ ಅಧಿಕಾರ.–** (1) ಕೇಂದ್ರ ಸರ್ಕಾರವು, ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರಲು ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ಅದರಲ್ಲೂ ಮುಖ್ಯವಾಗಿ ಮತ್ತು ಈ ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳಲ್ಲಿ ಈ ಮುಂದೆ ಹೇಳಿರುವ ಎಲ್ಲಾ ವಿಷಯಗಳಿಗೆ ಅಥವಾ ಯಾವುದೇ ವಿಷಯಕ್ಕೆ, ಎಂದರೆ:–

(ಎ) ಉಗ್ರಾಣ ಸೌಲಭ್ಯ ವ್ಯವಹಾರಗಳನ್ನು ಪ್ರಾರಂಭಿಸುವುದಕ್ಕಾಗಿ ಅಥವಾ ನಿರ್ವಹಿಸುವುದಕ್ಕಾಗಿ ವರ್ಗಾವಣೆಯ ಉಗ್ರಾಣ ರಸೀದಿಗಳನ್ನು ನೀಡುವುದಕ್ಕಾಗಿ ನೋಂದಣಿ ಪ್ರಮಾಣಪತ್ರವನ್ನು ಪಡೆದುಕೊಳ್ಳಲು ಅರ್ಜಿಯನ್ನು ಯಾವ ನಮೂನೆಯಲ್ಲಿ ಅಥವಾ ರೀತಿಯಲ್ಲಿ ಸಲ್ಲಿಸಬಹುದೋ ಆ ನಮೂನೆಗೆ ಮತ್ತು ರೀತಿಗೆ ಮತ್ತು 4ನೇ ಪ್ರಕರಣದ (2)ನೇ ಉಪ–ಪ್ರಕರಣದ ಮೇರೆಗೆ ಅಂಥ ಅರ್ಜಿಯ ಜೊತೆ ಇರಬೇಕಾದ ಫೀಜುಗಳಿಗೆ;

(ಬಿ) 4ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೇರೆಗೆ ನೀಡಬಹುದಾದ ಉಗ್ರಾಣಗಳ ನೋಂದಣಿ ಪ್ರಮಾಣಪತ್ರವನ್ನು ಯಾವ ನಮೂನೆಯಲ್ಲಿ ನೀಡಬಹುದೋ ಆ ನಮೂನೆಗೆ;

(ಸಿ) ಉಗ್ರಾಣಗಳ ನೋಂದಣಿಗೆ ಅರ್ಜಿ ಸಲ್ಲಿಸಿರುವ ಅರ್ಜಿದಾರನು, ಹಣಕಾಸು, ವ್ಯವಸ್ಥಾಪನೆ ಮತ್ತು ಇತರೆ ಅರ್ಹತಾ ಮಾನದಂಡ ಮತ್ತು ಸಕ್ಷಮತೆ ಕುರಿತಂತೆ 4ನೇ ಪ್ರಕರಣದ 4ನೇ ಉಪ–ಪ್ರಕರಣದ ಮೇರೆಗೆ ಮನವರಿಕೆ ಮಾಡಿಕೊಡಬೇಕೋ ಅಂಥ ಅರ್ಹತಾ ಮಾನದಂಡಕ್ಕೆ ಮತ್ತು ಸಕ್ಷಮತೆಗೆ;

(ಡಿ) ಮಾನ್ಯತೆ ನೀಡಿಕೆ ಏಜೆನ್ಸಿಯಾಗಿ ಕಾರ್ಯನಿರ್ವಹಿಸುವುದಕ್ಕಾಗಿ ಅರ್ಜಿ ಸಲ್ಲಿಸುವ ವ್ಯಕ್ತಿಯು 5ನೇ ಪ್ರಕರಣದ (2)ನೇ ಉಪ–ಪ್ರಕರಣದ ಮೇರೆಗೆ ಯಾವ ಅರ್ಹತೆ ಮತ್ತು ಇತರೆ ಅಗತ್ಯತೆಗಳ ಬಗ್ಗೆ ಮನವರಿಕೆ ಮಾಡಿಕೊಡಬೇಕೋ ಆ ಅರ್ಹತೆಗೆ ಮತ್ತು ಇತರೆ ಅಗತ್ಯತೆಗಳಿಗೆ;

(ಇ) 5ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೇರೆಗೆ ಮಾನ್ಯತೆ ನೀಡಿಕೆ ಏಜೆನ್ಸಿಯಾಗಿ ನೋಂದಾಯಿಸಿಕೊಳ್ಳಲು ಸಲ್ಲಿಸುವ ಅರ್ಜಿಯನ್ನು ಯಾವ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಸಲ್ಲಿಸಬೇಕೋ ಆ ನಮೂನೆಗೆ ಮತ್ತು ರೀತಿಗೆ ಹಾಗೂ 5ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೇರೆಗೆ ಅಂಥ ಅರ್ಜಿಯ ಜೊತೆಗೆ ಇರಬೇಕಾದ ಶುಲ್ಕಗಳಿಗೆ;

(ಎಫ್) 5ನೇ ಪ್ರಕರಣದ (4)ನೇ ಉಪ–ಪ್ರಕರಣದ ಮೇರೆಗೆ ಮಾನ್ಯತೆ ನೀಡಿಕೆ ಏಜೆನ್ಸಿಗೆ ಯಾವ ನಮೂನೆಯಲ್ಲಿ ನೋಂದಣಿ ಪ್ರಮಾಣಪತ್ರವನ್ನು ನೀಡಬೇಕೋ ಆ ನಮೂನೆಗೆ;

(ಜಿ) 28ನೇ ಪ್ರಕರಣದ ಮೇರೆಗೆ ಅಧ್ಯಕ್ಷರಿಗೆ ಮತ್ತು ಇತರೆ ಸದಸ್ಯರಿಗೆ ಸಂದಾಯ ಮಾಡಬೇಕಾದ ಸಂಬಳಕ್ಕೆ ಮತ್ತು ಭತ್ಯೆಗಳಿಗೆ ಹಾಗೂ ಸೇವೆಯ ಇತರೆ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ;

(ಎಚ್) 35ನೇ ಪ್ರಕರಣದ (2)ನೇ ಉಪ–ಪ್ರಕರಣದ (ಪಿ) ಖಂಡದ ಮೇರೆಗೆ ಪ್ರಾಧಿಕಾರವು ಚಲಾಯಿಸಬಹುದಾದಂಥ ಇತರೆ ಅಧಿಕಾರಗಳಿಗೆ;

(ಐ) 38ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಪ್ರಾಧಿಕಾರವು ಯಾವ ನಮೂನೆಯಲ್ಲಿ ಮತ್ತು ಯಾವ ರೀತಿಯಲ್ಲಿ ಲೆಕ್ಕಪತ್ರಗಳ ವಾರ್ಷಿಕ ವಿವರಪತ್ರವನ್ನು ಇಡಬೇಕೋ ಆ ನಮೂನೆಗೆ ಮತ್ತು ಆ ರೀತಿಗೆ;

(ಜೆ) 39ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಪ್ರಾಧಿಕಾರವು ವಿವರಣಾ ಪಟ್ಟಿಗಳನ್ನು ಮತ್ತು ವಿವರಗಳನ್ನು ಯಾವ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಮತ್ತು ಯಾವ ಅವಧಿಯೊಳಗೆ ಕೇಂದ್ರ ಸರ್ಕಾರಕ್ಕೆ ಒದಗಿಸಬೇಕಾಗಿದೆಯೋ ಆ ನಮೂನೆಗೆ ಮತ್ತು ರೀತಿಗೆ ಮತ್ತು ಅವಧಿಗೆ;

(ಕೆ) 42ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ಅಪೀಲು ಪ್ರಾಧಿಕಾರಕ್ಕೆ ಅಪೀಲನ್ನು ಯಾವ ನಮೂನೆಯಲ್ಲಿ ಮತ್ತು ಯಾವ ರೀತಿಯಲ್ಲಿ ಸಲ್ಲಿಸಬಹುದೋ ಆ ನಮೂನೆ ಮತ್ತು ರೀತಿ ಮತ್ತು ಅಂಥ ಅಪೀಲಿನೊಂದಿಗೆ ಇರಿಸಬೇಕಾದ ಫೀಜಿಗೆ:

(ಎಲ್) 42ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ಅಪೀಲನ್ನು ವಿಲೆಮಾಡುವಾಗ ಅಪೀಲು ಪ್ರಾಧಿಕಾರವು ಅನುಸರಿಸಬೇಕಾದ ಪ್ರಕ್ರಿಯೆಗೆ;

(ಎಂ) ಯಾವ ವಿಷಯವನ್ನು ನಿಯಮಗಳ ಮೂಲಕ ವಿನಿಯಮಿಸಬೇಕಾಗಿದೆಯೋ ಅಥವಾ ವಿನಿಯಮಿಸಬಹುದೋ ಅಥವಾ ಯಾವ ವಿಷಯದ ಬಗ್ಗೆ ನಿಯಮಗಳ ಮೂಲಕ ಉಪಬಂಧಗಳನ್ನು ಕಲ್ಪಿಸಬೇಕಾಗಿದೆಯೋ ಅಥವಾ ಕಲ್ಪಿಸಬಹುದೋ ಆ ಯಾವುದೇ ಇತರ ವಿಷಯಕ್ಕೆ

– ನಿಯಮಗಳನ್ನು ರಚಿಸಬಹುದು.

51. **ನಿಯಮಗಳನ್ನು ರಚಿಸಲು ಪ್ರಾಧಿಕಾರದ ಅಧಿಕಾರ.**– (1) ಪ್ರಾಧಿಕಾರವು, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ಕೇಂದ್ರ ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದು ಮತ್ತು ಉಗ್ರಾಣ ಸೌಲಭ್ಯ ಸಲಹಾ ಸಮಿತಿಯೊಂದಿಗೆ ಸಮಾಲೋಚಿಸಿ, ಅಧಿಸೂಚನೆಯ ಮೂಲಕ, ಅಧಿನಿಯಮಕ್ಕೆ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಸುಸಂಗತವಾಗಿರುವಂಥ ವಿನಿಯಮಗಳನ್ನು ರಚಿಸಬಹುದು.

(2) ಅದರಲ್ಲೂ ಮುಖ್ಯವಾಗಿ ಮತ್ತು ಈ ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ವಿನಿಯಮಗಳು ಈ ಮುಂದಿನ ಎಲ್ಲಾ ಅಥವಾ ಯಾವುದೇ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) 3ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ಮಾನ್ಯತೆ ನೀಡಿಕೆ ಏಜೆನ್ಸಿಗಳ ಅಧಿಕಾರಗಳನ್ನು ವಿನಿಯಮಿಸುವ ವಿಷಯಗಳು;

(ಬಿ) 8ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ಉಗ್ರಾಣ ಸೌಲಭ್ಯ ವ್ಯವಹಾರದ ದಾಖಲೆಗಳನ್ನು ಮತ್ತು ಲೆಕ್ಕಪತ್ರಗಳನ್ನು ಉಗ್ರಾಣ ಪಾಲಕನು ಯಾವ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಮತ್ತು ಯಾವ ಅವಧಿಯವರೆಗೆ ಇಡಬೇಕೋ ಆ ನಮೂನೆ ಮತ್ತು ರೀತಿ ಮತ್ತು ಆ ಅವಧಿ;

(ಸಿ) 9ನೇ ಪ್ರಕರಣದ (7)ನೇ ಉಪ-ಪ್ರಕರಣದ ಮೇರೆಗೆ ಉಗ್ರಾಣ ಪಾಲಕನು ಸರಕುಗಳನ್ನು ಅಥವಾ ಅವುಗಳ ಯಾವುದೇ ಭಾಗವನ್ನು ವಿಲೆ ಮಾಡುವ ಹಾಗೂ ಮಾರಾಟದಿಂದ ಬಂದ ಹಣವನ್ನು ಎಸ್ಕ್ರೋ ಖಾತೆಯಲ್ಲಿ ಇಡುವ ರೀತಿ;

(ಡಿ) 10ನೇ ಪ್ರಕರಣದ (10)ನೇ ಉಪ-ಪ್ರಕರಣದ ಮೇರೆಗೆ ಮಾರಾಟದ ವಿಧಾನ;

(ಇ) 23ನೇ ಪ್ರಕರಣದ (2)ನೇ ಉಪ-ಪ್ರಕರಣದ ಪರಂತುಕದ ಮೇರೆಗೆ ಉಗ್ರಾಣ ರಸೀದಿಯ ದ್ವಿಪ್ರತಿಯನ್ನು ನೀಡುವ ರೀತಿ;

(ಎಫ್) 31ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಪ್ರಾಧಿಕಾರದ ಸಭೆಗಳನ್ನು ನಡೆಸುವ ಕಾಲ ಮತ್ತು ಸ್ಥಳಗಳು ಸಭೆಯ ಕಾರ್ಯಕಲಾಪಗಳ ನಿರ್ವಹಣೆಗೆ ಅವಶ್ಯವಾದ ಕೋರಂ ಸೇರಿದಂತೆ ಆ ಸಭೆಗಳಲ್ಲಿ ಅನುಸರಿಸಬೇಕಾದ ಪ್ರಕ್ರಿಯೆ;

(ಜಿ) 33ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ಪ್ರಾಧಿಕಾರದ ಅಧಿಕಾರಿಗಳ ಮತ್ತು ಇತರ ನೌಕರರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು;

(ಎಚ್) 35ನೇ ಪ್ರಕರಣದ (2)ನೇ ಉಪ-ಪ್ರಕರಣದ (ಬಿ)ಖಂಡದ ಮೇರೆಗೆ ಮಾನ್ಯತೆ ನೀಡಿಕೆ ಏಜೆನ್ಸಿಗಳ ನೋಂದಣಿ ಮತ್ತು ಕಾರ್ಯನಿರ್ವಹಣೆ ಅಂಥ ನೋಂದಣಿಯ ನವೀಕರಣ, ಮಾರ್ಪಾಡು, ನೋಂದಣಿಯನ್ನು ಹಿಂಪಡೆಯುವುದು, ಅಮಾನತ್ತಿನಲ್ಲಿ ಇಡುವುದು ಅಥವಾ ರದ್ದುಮಾಡುವುದು ಮತ್ತು ಉಗ್ರಾಣಗಳಿಗೆ ಮಾನ್ಯತೆ ನೀಡುವುದಕ್ಕಾಗಿ ಮಾನ್ಯತೆ ನೀಡಿಕೆ ಏಜೆನ್ಸಿಗಳ ನೌಕರರ ನೀತಿ ಸಂಹಿತೆ;

(ಐ) 35ನೇ ಪ್ರಕರಣದ (2)ನೇ ಉಪ-ಪ್ರಕರಣದ (ಎಫ್) ಖಂಡದ ಮೇರೆಗೆ ಸರಕುಗಳ ದರ್ಜೆ ನಿಗದಿ ಮಾಡಲು ಪ್ರಮಾಣೀಕರಣ ಏಜೆನ್ಸಿಗಳಿಗೆ ಅನುಮೋದನೆ ನೀಡುವುದಕ್ಕೆ ಸಂಬಂಧಿಸಿದ ಮಾನದಂಡಗಳು;

(ಜೆ) 35ನೇ ಪ್ರಕರಣದ (2)ನೇ ಉಪ-ಪ್ರಕರಣದ (ಎಚ್) ಖಂಡದ ಮೇರೆಗೆ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ವಿಧಿಸಬೇಕಾದ ಫೀಜುಗಳ ಮತ್ತು ಇತರ ಶುಲ್ಕಗಳ ದರ;

(ಕೆ) ಯಾವ ವಿಷಯವನ್ನು ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬೇಕಾಗಿದೆಯೋ ಅಥವಾ ನಿರ್ದಿಷ್ಟಪಡಿಸಬಹುದೋ ಅಥವಾ ಯಾವ ವಿಷಯದ ಬಗ್ಗೆ ವಿನಿಯಮಗಳಲ್ಲಿ ಉಪಬಂಧಗಳನ್ನು ಕಲ್ಪಿಸಬೇಕಾಗಿದೆಯೋ ಅಥವಾ ಕಲ್ಪಿಸಬಹುದೋ ಆ ಯಾವುದೇ ಇತರ ವಿಷಯ;

**52. ನಿಯಮಗಳನ್ನು ಮತ್ತು ವಿನಿಯಮಗಳನ್ನು ಸಂಸತ್ತಿನ ಮುಂದೆ ಇಡುವುದು.**– ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು ಮತ್ತು ಪ್ರಾಧಿಕಾರವು ರಚಿಸಿದ ಪ್ರತಿಯೊಂದು ವಿನಿಯಮವನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನಕ್ಕೆ ಅಥವಾ ಒಂದಾದಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಅಥವಾ

ವಿನಿಯಮನದಲ್ಲಿ ಯಾವುದೇ ಮಾರ್ಪಾಡು ಮಾಡಬೇಕೆಂದು ಎರಡೂ ಸದನಗಳೂ ಒಪ್ಪಿದರೆ ಅಥವಾ ಆ ನಿಯಮವನ್ನು ಮತ್ತು ವಿನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳೂ ಒಪ್ಪಿದರೆ, ಆ ತರುವಾಯ ಆ ನಿಯಮವು ಅಥವಾ ವಿನಿಯಮವು ಆ ತರುವಾಯ ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು, ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು, ಆ ನಿಯಮದ ಅಥವಾ ವಿನಿಯಮದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕ ಉಂಟು ಮಾಡತಕ್ಕದ್ದಲ್ಲ.

**53. ಅಧಿನಿಯಮವು ಅಧ್ಯಾರೋಹಿ ಪರಿಣಾಮ ಹೊಂದಿರುವುದು.**– ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅಥವಾ ಈ ಅಧಿನಿಯಮವಲ್ಲದ ಯಾವುದೇ ಕಾನೂನಿನ ಬಲದಿಂದಾಗಿ ಪರಿಣಾಮ ಹೊಂದಿರುವ ಯಾವುದೇ ಲಿಖಿತದಲ್ಲಿ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾದುದು ಏನೇ ಒಳಗೊಂಡಿದ್ದರೂ ಆ ಉಪಬಂಧಗಳು ಪರಿಣಾಮಕಾರಿಯಾಗಿರತಕ್ಕದ್ದು.

**54. ತೊಂದರೆಗಳನ್ನು ನಿವಾರಿಸಲು ಅಧಿಕಾರ.**– (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ತೊಂದರೆಗಳನ್ನು ನಿವಾರಿಸುವುದಕ್ಕೆ ಅವಶ್ಯವೆಂದು ಕಂಡು ಬರುವ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಮೂರು ವರ್ಷಗಳ ಮುಕ್ತಾಯದ ನಂತರ ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು ಅದನ್ನು ಮಾಡಿದ ನಂತರ ಸಾಧ್ಯವಾಗಬಹುದಾದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇರಿಸತಕ್ಕದ್ದು.

**55. 1899ರ ಅಧಿನಿಯಮ 2ಕ್ಕೆ ತಿದ್ದುಪಡಿ.**– ಸ್ಟಾಂಪ್ ಅಧಿನಿಯಮ, 1899ರ 8ಬಿ ಪ್ರಕರಣದ ತರುವಾಯ, ಈ ಮುಂದಿನ ಪ್ರಕರಣವನ್ನು ಸೇರಿಸತಕ್ಕದ್ದು ಎಂದರೆ:–

**"8 ಸಿ. ವರ್ಗಾವಣೀಯ ಉಗ್ರಾಣ ರಸೀದಿಗಳು ಸ್ಟ್ಯಾಂಪ್ ಸುಂಕಕ್ಕೆ ಗುರಿಯಾಗದಿರುವುದು.**

ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ವರ್ಗಾವಣೀಯ ಉಗ್ರಾಣ ರಸೀದಿಗಳು ಸ್ಟ್ಯಾಂಪು ಸುಂಕಕ್ಕೆ ಗುರಿಯಾಗತಕ್ಕದ್ದಲ್ಲ".

* * * * *